Official Resolution

re: Ratification to the Constitution (23rd Amendment) Bill, 1969

Sri K. PUTTASWAMY (Minister for Law, Labour and Parliamentary Affairs).—Sir, I move:

"That this House ratifies the amendments to the Constitution of India falling within the purview of the proviso to article 368 thereof, proposed to be made by the Constitution (Twenty-third Amendment) Bill, 1969, as passed by both Houses of Parliament."

Mr. SPEAKER.—Motion moved:

"That this House ratifies the amendments to the Constitution of India falling within the purview of the proviso to article 368 thereof, proposed to be made by the Constitution (Twenty-third Amendment) Bill, 1969, as passed by the both Houses of Parliament."

†Sri M. NAGAPPA (Raichur).—Sir, on a point of order. As per rule 21 of the Rules of Procedure if a day is fixed for the discussion of the Governor's Address no other matter can be taken up. Rule 21(1) reads thus:

"21. (1) Notwithstanding that a day has been allotted for discussion on the Governor's Address :—

(i) a motion or motions for leave to introduce a Bill or Bills may be made and a Bill or Bills may be introduced on such day, and

(ii) other business of a formal character may be transacted on such day before the Assembly commences or continues the discussion on the Address."

Therefore this day is fixed for discussion of the Governor's Address and it is not a formal business. The resolution is being moved under the provisions of article 368 of the Constitution and there will be discussion both in favour and against the resolution which would take a long time. Therefore, I submit that rule 21 is a bar for taking up such resolution for consideration by this House on a day fixed for the discussion on Governor's Address.

Sri K. PUTTASWAMY.—I would like to refer to sub-rule (2) of rule 21 of the Rules of Procedure. It reads as follows:

"21. (2) The discussion on the Address may be postponed in favour of a Government Bill or other Government business on a motion being made that the discussion on the Address be adjourned to a subsequent day to be appointed by the Speaker ...."

(SRI K. PUTTASWAMY)

Sir, apart from this, it has been agreed that in view of the urgency, the official resolution which I have moved just now, should be taken up first according to the list of business also it should be presumed that the Speaker has fixed the discussion on Governor's Address after the item relating to official resolution. Therefore, it does not offend rule 21.

Sri M. NAGAPPA.—According to rule 21(2) a special motion has to be made.

Mr. SPEAKER.—If it is necessary the motion will be moved. This is a matter of urgency because the present period of reservation of seats to the Scheduled Castes and Scheduled Tribes etc., would expire on 26th of this month and unless fifty percent of the States ratify the amendments the President of India will not be in a position to give his assent and make it a law. This matter was placed before the Business Advisory Committee and it was agreed to. Unfortunately no mention has been made in the report of the Committee. In view of the urgency involved, I think there should not be any objection for taking up this official resolution for discussion in this House.

Sri M. NAGAPPA.—Sir, I have sent an amendment to the resolution.

Mr. SPEAKER.—The Hon. Member may move his amendment now.

Sri M. NAGAPPA.—I beg to move :

"That the following words shall be added at the end of the resolution.—

"Provided that the amendment suggested in clause 5 of the Constitution (Twenty-Third amendment) Bill 1969 shall not be made applicable to article 334 (b), of the Constitution"

Mr. SPEAKER.—Amendment moved :

" That the following words shall be added at the end of the resolution "

" Provided that the amendment auggested in clause 5 of the Constitution (Twenty-Third amendment) Bill 1969 shall not be made applicable to article 334 (b), of the Constitution. "

Both the resolution and the amendment are before the House for discussion.

3-30 P.M.

Sri K. PUTTASWAMY.– Sir, as it was rightly observed by the Hon. Speaker, this is the one official resolution which I have the honour to move, which I hope, would receive the unanimous approval

of this House. Sir, the 23rd Amendment to the Constitution mainly relates to amendment of Article 334. Sir, as the House is aware, under article 334 reservation of seats in the House of the people and in the Legislative Assemblies of the State, was made in favour of scheduled castes and scheduled tribes to begin with for a period of 10 years, commencing from 26th January 1950. If it had been left unamended, it would have lapsed on the 26th January 1960. Sir, the Parliament and also the State Legislatures felt that the circumstances that existed at the time of making provision for reservation in favour of scheduled tribes and scheduled castes remained there even in 1960 and therefore, Sir, an amendment was passed increasing the period from 10 years to 20 years. As it was also mentioned by the Hon. Speaker, that 20 years too will have lapsed on 26th January 1970. Sir, the Parliament, I believe, have considered this question and have come to the conclusion that the scheduled castes and scheduled tribes require protection for a further period of 10 years. The simple amendment is that for the words "20 years", the words "30 years" have to be substituted. Sir, the House is fully aware that the handicaps under which the scheduled castes and scheduled tribes suffered have not been fully wiped out. Sir, sincere efforts have been made both by the Government at the Centre and also State Governments to remove the handicaps, to improve their conditions, to give them education, to make them economically strong and come up to the level of other classes. But, unfortunately, it has not been possible and they have not come up to the level of other classes because adequate facilities also have not been made available. Sir, as you all know, Hindusim suffers from the curse of untouchability. Sir, it cannot be claimed that untouchability is wiped out. Sincere and honest efforts are made but yet untouchability persists. Unless this untouchability is wiped out, I do not think, Sir, there is any hope either for Hinduism or for this country. Therefore, Sir, I expect that the Governments in this country would make all-out efforts in the next 10 years and see that the scheduled castes and scheduled tribes are enable to rise to the level of others.

At this stage, I may also make a reference to the amendment that my hon. Friend Mr. Nagappa has moved. Sir, he has an amendment to article 334(b). Article 334(b) relates to representation of Anglo-Indian community in the House of the People and in the Legislative Assemblies of the States by nomination. Sir, even in this case, I would plead with my friend Mr. Nagappa to be generous towards this community which is sometimes called the microscopic minority. We have to be a little generous to this community. Sir, the Anglo-Indian community has had this privilege for the past 20 years and I do feel, Sir, that they have not been able to develop the capacity of contesting with others at the general elections and getting themselves elected. Therefore, Sir, I honestly feel that they also require this protection. Incidentally there are one or two other amendments. They relate to Nagaland and Assam. Now, in the new State which would come into being known as Meghalaya, the majority of the people are scheduled tribes and therefore

(SRI K. PUTTASWAMY)

there is no need for protection. So, article 330 and 332 are sought to be amended. With these remarks I request this House to kindly accord unanimous approval to my resolution.

[MR. DEPUTY SPEAKER in the Chair]

Sri BOLA RAGHURAMA SHETTY (Karkal).—Hon. Member Sri Nagappa's amendment is not circulated to the House. We do not know what the amendment is. How can we participate in the debate ?

Mr. DEPUTY SPEAKER.—That will be done.

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರುವ ಸಂವಿಧಾನದ 368 ವಿಧಿಯ ಪ್ರಕಾರ ರಾಜ್ಯಾಂಗವನ್ನು ತಿದ್ದುಪಡಿಮಾಡತಕ್ಕಂಥ ಒಂದು ಮಸೂದೆಯನ್ನು ಕಾನೂನು ರೀತ್ಯ ನಾವು ಅನುಮೋದನೆ ಮಾಡುವ ಅಥವಾ ವಿರೋಧಿಸುವ ಕೆಲಸವನ್ನು ಮಾಡಬೇಕಾಗಿದೆ. ನಾನು ಸಾಮಾನ್ಯವಾಗಿ ಈ ಒಂದು ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ. ಆದರೆ ಈ ತಿದ್ದುಪಡಿ ಸಮರ್ಪಕವಾಗಿದೆ, ಲೋಪ ದೋಷಗಳು ಇಲ್ಲ ಅಥವಾ ಇದನ್ನು ವಿರೋಧಿಸುವುದಕ್ಕೆ ಸಾಕಾದಷ್ಟು ಕಾರಣಗಳು ಇಲ್ಲ ಎಂದು ನಾನು ತಿಳಿಯುವುದಿಲ್ಲ. ಇದರಲ್ಲಿ ಮುಖ್ಯವಾಗಿ ಹರಿಜನರು, ಗಿರಿಜನರು ಅವರಿಗೆ ರಾಜ್ಯಾಂಗದತ್ತವಾದ ಮೀಸಲು ಸ್ಥಾನಗಳು ಏನು ದೊರಕಿವೆ ಈ ವರ್ಷ ಗತಿಸುವ ಮೂಲಕ ಈ ಒಂದು ಸೌಲಭ್ಯ ಅವರಿಗೆ ಮುಂದುವರಿಯುವುದಿಲ್ಲ ಎನ್ನುವುದನ್ನು ತಿಳಿದು ಮತ್ತು ಈ 20 ವರ್ಷಗಳಲ್ಲಿ ಅವರ ಸ್ಥಿತಿಗಳು ಸಾಕಷ್ಟು ಸುಧಾರಣೆ ಆಗಿಲ್ಲ ಎನ್ನುವುದನ್ನು ತಿಳಿದು ರಾಜ್ಯಾಂಗಕ್ಕೆ ಈ 23ನೇ ತಿದ್ದುಪಡಿಯನ್ನು ಲೋಕಸಭೆ ಮತ್ತು ರಾಜ್ಯಸಭೆಯು ಒಪ್ಪಿಕೊಂಡು ತಂದಿದ್ದಾರೆ. ದಿವಂಗತ ಡಾ॥ ಅಂಬೇಡ್ಕರ್ ಅವರು ಕೊನೆಯಸಾರಿ ಬೆಂಗಳೂರಿಗೆ ಭೇಟಿ ಇತ್ತಾಗ ಸುಭಾಷ್‌ನಗರ ಮೈದಾನದಲ್ಲಿ ಮಾಡಿದ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ಅವರು ಈ ಸಂವಿಧಾನವನ್ನು ರಚಿಸುವ ಕರ್ತೃಗಳಲ್ಲಿ ಒಬ್ಬರು. ಅವರು ಹೇಳಿದರು, ಹರಿಜನರಿಗೆ ಏನು ಮೀಸಲು ಸ್ಥಾನಗಳನ್ನು ಕೊಡಬೇಕೆಂದು ಆಗ ಯೋಚನೆ ಮಾಡಿದ್ದರೋ ಅದು ಚಮಚದಲ್ಲಿ ಅಥವಾ ವಳಲೆಯಲ್ಲಿ ಮಗುವಿಗೆ ಹಾಲು ಕೊಟ್ಟು ಬೆಳೆಸುವ ಸಂಪ್ರದಾಯದಂತೆ ಎಂದು. ಅದು ಇವತ್ತು ತಪ್ಪಾಗಿದೆಯೆಂದು ನನಗನ್ನಿಸುತ್ತದೆ. ನಾವು ಬೇರೆ ಜನರೊಂದಿಗೆ ಸಮ ಸಮ ನಿಂತು ಹೋರಾಡಿ ನಮ್ಮ ಸ್ಥಾನಮಾನಗಳನ್ನು ಗಳಿಸಿಕೊಳ್ಳುವ ಆತ್ಮಾಭಿಮಾನವನ್ನು ಗಳಿಸಿಕೊಳ್ಳಬೇಕು, ಆ ಆತ್ಮ ವಿಶ್ವಾಸವನ್ನು ಈ ಜನಗಳಿಗೆ ತಂದು ಕೊಡಬೇಕಾಗಿದೆ, ಈ ಮೀಸಲು ಸ್ಥಾನಗಳನ್ನು ತೆಗೆದುಹಾಕಬೇಕಾಗಿದೆಯೆಂದು ಅವರು ಹೇಳಿದ್ದರು. ಅದು ನನಗೆ ನೆನಪು ಇರುವ ಹಾಗೆ ಸರಿಯೆಂದು ಈಗ ನನಗನ್ನಿಸುತ್ತದೆ. ಅವರು ಆ ರೀತಿ ಹೇಳುವಾಗ ಅವರ ಅಂತಃಕರಣದಲ್ಲಿ ಇದ್ದಂಥ ಒಂದು ದುಗುಡವನ್ನು ಅಥವಾ ಸವರ್ಣೀಯರ ಬಗ್ಗೆ ಅವರಿಗೆ ಇದ್ದಂಥ ಒಂದು ಪ್ರೀತಿ, ವಿಶ್ವಾಸದಿಂದ ಈ ರೀತಿಯಾಗಿ ಹೇಳಿದರೇ ಹೊರತು ಅವರಿಗೆ ಮೀಸಲು ಸ್ಥಾನ ಕೊಡಬಾರದು ಎಂದು ಹೇಳಲಿಲ್ಲ. ಅದೇ ಸಂದರ್ಭದಲ್ಲಿ ಅವರು ಬೌದ್ಧಮತಕ್ಕೆ ಸೇರಿಕೊಂಡು, ಹಿಂದೂಮತೀಯರಾಗಿ ಎಷ್ಟೊಂದು ಸೇವೆ ಮಾಡಿದ್ದಾಗೂ ಕೂಡ ಸುಮಾರು 3–4 ಸಾವಿರ ವರ್ಷಗಳಿಂದಲೂ ನಮ್ಮನ್ನ ಪಂಚಮರು, ಅಸ್ಪೃಶ್ಯರು ಎಂಬುದಾಗಿ ಭಾವನೆ ಮಾಡಿ ನಾಯಿಗಳಂತೆ ನಮ್ಮನ್ನು ಹೊರಗೆ ಇಟ್ಟು ಕಾಣುತ್ತಿದ್ದಾರೆಂದು ಹೇಳುತ್ತಿದ್ದರು. ಆದ್ದರಿಂದ ಈ ಅಸ್ಪೃಶ್ಯತೆಯನ್ನು ತೊಲಗಿಸುವುದರಲ್ಲಿ ಇದುವರೆಗೆ ಯಾರೂ ಕಾರ್ಯತತ್ಪರರಾಗಿಲ್ಲ. ಮಹಾತ್ಮ ಗಾಂಧಿಯವರು ನಮ್ಮನ್ನು ಹತ್ತಿರಕ್ಕೆ ಕರೆದುಕೊಂಡು ನಮ್ಮ ಜೊತೆಯಲ್ಲಿ ಕಲೆತು ಸಹಭೋಜನ ಮಾಡಿ ನಮಗೆ ಹರಿಜನರೆಂದು ಹೆಸರಿಟ್ಟು ಬಹಳಮಟ್ಟಿಗೆ ಉಪಚಾರ ಮಾಡಿದ್ದರೂ ಕೂಡ ಸವರ್ಣ ಹಿಂದೂಗಳ ನಂಬಿಕೆ ಮತ್ತು ಅವರ ಅಭಿಪ್ರಾಯದಲ್ಲಿ ನಾವು ಕೀಳು ಎನ್ನುವ ಭಾವನೆ ಇನ್ನೂ ಇದ್ದೇ ಇದೆ ಎಂಬುದಾಗಿ ಅವರು ಹೇಳುತ್ತಿದ್ದರು. ಅದಕ್ಕಾಗಿ ನಾವು ಹಿಂದೂಮತವನ್ನು ತ್ಯಜಿಸಿ, ಬೌದ್ಧಮತವನ್ನು ಸೇರೋಣ, ಬೌದ್ಧಮತವನ್ನು ಅವಲಂಬಿಸಿದ ಮೇಲಾದರೂ ನಮ್ಮನ್ನು ಮುಟ್ಟಲು ಅರ್ಹರಾದಂಥ ಮನುಷ್ಯ ಅಥವಾ ಪ್ರಾಣಿ ಎಂದು ನಮ್ಮನ್ನು ಇವರು ತಿಳಿದಾರು. ಆದ್ದರಿಂದ ಈ ಕಳಂಕದಿಂದ ಪಾರಾಗಬೇಕಾದರೆ ನಮಗೆ ಉಳಿದಿರುವ ದಾರಿ, ಬುದ್ಧನಿಗೆ 'ಅನ್ಯಥಾ ಶರಣಂ ನಾಸ್ತಿ' ಎಂದು ಹೇಳುವುದೇ ಆಗಿದೆ. ಆದ್ದರಿಂದ, ಸ್ವತಃ ಅವರು ಬೌದ್ಧಮತವನ್ನು ಅವಲಂಬಿಸಿಕೊಂಡು ಬಂದರು

ನಾವು ಬುದ್ಧನಿಗೆ ಶರಣಾಗಬೇಕೇ ಹೊರತು ನಮಗೆ ಬೇರೆ ದಾರಿ ಇಲ್ಲವೆಂದು ಹೇಳಿದ್ದಾರೆ. ಇವತ್ತು ಏನು ಆಚರಣೆಯಲ್ಲಿ ನಡೆಯುತ್ತಾ ಇದೆಯೆಂದು ಹೇಳಿದರೆ ಹರಿಜನರನ್ನು ಸಜೀವರಾಗಿ ಸುಡುತ್ತಿದ್ದಾರೆ. ಅಂತಹ ಪ್ರಕರಣವನ್ನು ನಿಲ್ಲಿಸಬೇಕಾದರೆ, ಆ ಜನತೆಯಲ್ಲಿ ಆತ್ಮಾಭಿಮಾನವನ್ನು ತುಂಬಲು ಮಾನ್ಯ ಶ್ರೀ ರಾಮಸ್ವಾಮಿ ನಾಯಕರ್ ಅಂಥವರೇ ತಮಿಳು ನಾಡಿನಲ್ಲಿ ಸ್ವಾಭಿಮಾನದಿಂದ Self-respectors ಚಳುವಳಿಯನ್ನು ಪ್ರಾರಂಭಿಸಿದರು. ಆ ಜನತೆಯ ಬಗ್ಗೆ ಪ್ರತಿಯೊಬ್ಬನಲ್ಲಿಯೂ ತನ್ನ ಆತ್ಮದಲ್ಲಿ ಸ್ವಾಭಿಮಾನ ವುಂಟಾಗಬೇಕು. ಆ ಕಾರಣದಿಂದ ಬೌದ್ಧಮತವನ್ನು ಅವಲಂಬಿಸತ್ತೇವೆಂದು ಹೇಳಿದರು. ದಿವಂಗತ ಡಾ|| ಅಂಬೇಡ್ಕರ್ ಅವರ ವಾದ ಸಮರ್ಥನೀಯ ಹಾಗೂ ಅಂಗೀಕಾರಕ್ಕೆ ಅರ್ಹವಾದುದೆಂದು ಕೆಲವರು ಅವರನ್ನು ಬೆಂಬಲಿಸಿದವರೂ ಕೂಡ ಸ್ಕಾಲರ್‌ಷಿಪ್ ಮತ್ತು ಸೇಕಡ 18ರಷ್ಟು ನೌಕರರಿಗಳಲ್ಲಿ ಮೀಸಲು ಸ್ಥಾನಗಳನ್ನು ಕ್ರಿಶ್ಚಿಯನ್ ಆದರೆ ಕೊಡುವುದಿಲ್ಲ, ಬೌದ್ಧಮತಾವಲಂಬಿಯಾದರೆ ಕೊಡುವುದಿಲ್ಲ ಎನ್ನುವ ಸಣ್ಣಪುಟ್ಟ ಆಶೆಗಳಿಗೆ ತುತ್ತಾಗಿ ಇತರರು ಹಿಂದೂಮತವನ್ನು ಅಂಟಿಕೊಂಡಿದ್ದಾರೆಂದು ನನಗನ್ನಿಸುತ್ತದೆ ಎಂದು ಅಸ್ಪೃಶ್ಯತೆ ಹೋಗುತ್ತದೋ ಮತ್ತು ಎಂದು ಅವರಿಗೆ ಸಮಾನತೆ ಬರುತ್ತದೋ ನನಗೆ ಗೊತ್ತಿಲ್ಲ. ಈ ದೃಷ್ಟಿಯಿಂದ ನೋಡಿದರೆ ಇದರಲ್ಲಿ ರಾಜಕೀಯವೇನೂ ಇಲ್ಲವೆಂದು ನಾನು ತಿಳಿಯುತ್ತೇನೆ. ನನ್ನ ಅಭಿಪ್ರಾಯದಲ್ಲಿಯೂ ಕೂಡ ನಾವು ಕಾಗದದ ಮೇಲೆ ಅಥವಾ ಗಾಂಧಿ ಜನ್ಮ ಶತಾಬ್ದಿ ದಿವಸ ನಾವು ಎಲ್ಲ ಸಮಾನರು, ಒಂದೇ ದೇಶದವರು, ಭಾರತೀಯರು ಎಂದು ದೊಡ್ಡ ದೊಡ್ಡ ವಾಕ್ಯಗಳಲ್ಲಿ ನಮ್ಮನ್ನು ನಾವೇ ವರ್ಣಿಸಿಕೊಂಡಾಗ್ಯೂ ಕೂಡ ವಾಸ್ತವವಾಗಿ ನಾವು ಇವತ್ತು ಜಾತೀಯತೆಯನ್ನು ಬಹಳವಾಗಿ ಆಚರಣೆಯಲ್ಲಿ ತರುತ್ತಿದ್ದೇವೆ. ಅದರಲ್ಲಿಯೂ ಸುಮಾರು ಸೇಕಡ 80 ರಷ್ಟು ಹರಿಜನರು ಇಂದು ಹಳ್ಳಿಗಳಲ್ಲಿದ್ದಾರೆ. ಅವರಿಗೆ ಸವರ್ಣೀಯ ಹಿಂದೂಗಳು ಕೊಡುವ ಕಿರುಕುಳಗಳನ್ನು ನೋಡಿದರೆ ನನಗೆ ಬಹಳ ವ್ಯಸನವಾಗುತ್ತದೆ. ನನ್ನ ಹಳ್ಳಿಯನ್ನು ಮೊದಲ್ಗೊಂಡು ನೋಡಿದರೆ, ಅಲ್ಲಿ ಯಾವ ನಾಯಿಯನ್ನು ನಾವು ಅಡಿಗೆ ಮನೆಯವರೆಗೂ ಎತ್ತಿಕೊಂಡು ಓಡಾಡಿಸುತ್ತೇವೋ ಅದಕ್ಕಿಂತ ಕಡೆಯಾಗಿ ಈ ಜನತೆಯನ್ನು ನೋಡುತ್ತಾರೆ. ಇವತ್ತು ಬಹಿರಂಗವಾಗಿ ಹಳ್ಳಿಯಲ್ಲಿ ಅವರು ಕುಡಿದಂಥ ಲೋಟದಲ್ಲಿ ನಾವು ನೀರು ಕುಡಿಯುವುದಕ್ಕೆ ತಯಾರು ಇಲ್ಲ. ಹೋಟಲಿನವರು ಅವರಿಗೆ ನೀರು ಕೊಡುವುದಕ್ಕೂ ತಯಾರು ಇಲ್ಲ. ಆದರೆ ಷಹರಿನಲ್ಲಿರತಕ್ಕವರೇನೋ ಜಾತಿ ಕೇಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಸರ್ಕಾರದ ನೌಕರಿಯಲ್ಲಿರುವವರು ಮಾತ್ರ ಸ್ವಲ್ಪಮಟ್ಟಿಗೆ ಅನ್ವಯಿಸುತ್ತದೆ ಅದು ಬಿಟ್ಟರೆ ಇನ್ನು ರೈಲು ಮತ್ತು ಬಸ್ಸುಗಳ ಹತ್ತಿರವಿರುವ ಹೋಟಲುಗಳಲ್ಲಿ ಹೆಚ್ಚು ಕಡಿಮೆ ಹಾಗೆಯೇ ನಡೆಸಿಕೊಂಡು ಹೋಗುತ್ತಾರೆ. ಈ 20 ವರ್ಷಗಳಲ್ಲಿ ನಾವು ಅವರನ್ನು ಸಮಾನರನ್ನಾಗಿ ಮಾಡಿದ್ದೇವೆನ್ನುವ ಮಾತನ್ನು ನಾನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದ ಅವರು ಮುಂದೆಬರುವವರೆಗೂ ಅವರಿಗೆ ಮೀಸಲು ಸ್ಥಾನ ಕೊಡಬೇಕೆನ್ನುವ ಮಾತು ಬೇರೆ. ಆದರೆ ಸದ್ಯಕ್ಕೆ 10 ವರ್ಷ ಕಾಲವಾದರೂ ಈ ಲೋಕಸಭೆ, ವಿಧಾನಸಭೆ ಮತ್ತು ಸರ್ಕಾರಿ ನೌಕರಿಯಲ್ಲಿ ಇರುವಂತಹ ಮೀಸಲು ಸ್ಥಾನಗಳಲ್ಲಿ ಅವರಿಗೆ ಅವಕಾಶ ಕೊಡಬೇಕೆನ್ನುವ ಒಂದು ಉದಾತ್ತತೆಯನ್ನು ಈ ನಮ್ಮ ಲೋಕಸಭೆಯವರು ಮತ್ತು ರಾಜ್ಯಸಭೆಯವರು ತೋರಿಸಿ ಈ ಮಸೂದೆಯನ್ನು ಅಂಗೀಕಾರ ಮಾಡಿ ನಮ್ಮ ಮುಂದೆ ಇಟ್ಟಿದ್ದಾರೆ. ಅದು ಸೂಕ್ತ ಮತ್ತು ಸದ್ಯಕ್ಕೆ ಈ ಒಂದು ತಿದ್ದುಪಡಿಯನ್ನು ಅಂಗೀಕಾರ ಮಾಡಬಹುದೆಂದು ನಾನು ಅಭಿಪ್ರಾಯ ಪಡುತ್ತೇನೆ. ಜೊತೆಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಮೀಸಲು ಸ್ಥಾನ ಕೊಟ್ಟರೆ ಮಾತ್ರ ಜನತೆಯ ಉದ್ಧಾರವಾಗುತ್ತದೆಂದು ಯಾರಾದರೂ ತಿಳಿದುಕೊಳ್ಳುವುದಾದರೆ ಅದು ತಪ್ಪು ಅಭಿಪ್ರಾಯ. ನೂರು ವರ್ಷಗಳ ಕಾಲದವರೆಗೂ ಈ ಮೀಸಲು ಸ್ಥಾನಗಳನ್ನು ಮೀಸಲಾಗಿಟ್ಟರೂ ಸಹ ವಸ್ತು ಸ್ಥಿತಿ ಬದಲಾವಣೆಯಾಗುವುದಿಲ್ಲ. ಸಮಾಜದಲ್ಲಿ ಒಂದು ಕ್ರಾಂತಿಯಾಗಬೇಕು. ಮನುಷ್ಯನಲ್ಲಿ ತಾನಾಗಿ ಒಂದು ಸ್ವಾಭಿಮಾನ ಉಂಟಾಗಬೇಕು. ಎಲರಿಗೂ ಒಂದೇ ತರವಾದ ಹಕ್ಕುಬಾಧ್ಯತೆ, ಘನತೆ ಗೌರವ ಇದೆಯೆಂಬ ಅರಿವು ಜನರಲ್ಲಿ ಉಂಟಾಗಬೇಕು. ಅದನ್ನು ಬೇರೆಯವರು ಕೊಡಬೇಕಾದ್ದಿಲ್ಲ. ಅವರು ಭಿಕ್ಷೆಗೆಂದು ಬರಬೇಕಾಗಿಲ್ಲವೆಂಬುದು ಜನರಲ್ಲಿ ಮನದಟ್ಟಾಗಬೇಕು. ಆದರೆ ಮೀಸಲು ಸ್ಥಾನಗಳನ್ನು ಕೊಡಬಾರದು ಎಂದು ಯಾರಾದರೂ ವಾದ ಮಾಡುವುದಾದರೆ ಅದು ತಪ್ಪಾಗುತ್ತದೆ. ಇವತ್ತು ಸ್ತ್ರೀಯರಿಗೆ ಕೆಲವು ಸ್ಥಾನಗಳನ್ನು ಕೊಡಬೇಕೆಂದು ಇದೆ-ನೂರಕ್ಕೆ 50 ಜನ ಸ್ತ್ರೀಯರು—ಸ್ತ್ರೀಯರನ್ನು ಪ್ರತಿನಿಧಿಸುತ್ತಾರೆಯೇ? ಇದು ನಮ್ಮ ಪುರುಷಪ್ರಧಾನವಾದ ಸಮಾಜ. ಸ್ತ್ರೀಯರಿಗೆ ಯಾವ ಹಕ್ಕೂ ನಾವು ಕೊಟ್ಟಿಲ್ಲ. ಅವರಿಗೆ ಅಡಿಗೆ ಮಾಡುವುದು, ಮಕ್ಕಳನ್ನು ಹಡೆಯುವುದು ಮತ್ತು ಸಾಕುವುದು, ಮತ್ತು ಗಂಡನಿಗೆ ಊಣಬಡಿಸುವುದು ಹೊರತು ಹೊಸಲು ದಾಟುವ, ಗ್ರಂಥ, ವೇದ ಅಧ್ಯಯನ ಮಾಡುವ ಅವಕಾಶವನ್ನು ಕೊಟ್ಟಿಲ್ಲ, ಮತ್ತು ಅವರಲ್ಲಿ ಆ ಗುಣಗಳಿಲ್ಲವೆಂದು ತೀರ್ಮಾನ ಮಾಡಿದ್ದೇವೆ. ಈ ಕಾರಣಗಳಿಂದ ದಿವಂಗತ ರಾಮ ಮನೋಹರ್ ಲೋಹಿಯಾರವರು ಸ್ತ್ರೀಯರನ್ನು

(ಶ್ರೀ ಎಸ್. ಗೋಪಾಲಗೌಡ)

ಹಿಂದುಳಿದ ವರ್ಗದಲ್ಲಿ ಸೇರಿಸಿದ್ದಾರೆ. ಅವರು ಯಾವ ಸಾರ್ವಜನಿಕ ಕ್ಷೇತ್ರದಲ್ಲಿ ನಿಂತು ಗೆದ್ದು ಬರುವುದಕ್ಕೆ ಸಾಧ್ಯ? ದೇಶದಲ್ಲಿ ಗಂಡನ ಹಿಂದೆ ಹೆಂಡತಿಯ ಓಟು ಬೀಳುವುದು ಸ್ವಾಭಾವಿಕ. ಆದ್ದರಿಂದ ಓಟುಗಳ ದೃಷ್ಟಿಯಿಂದ ಕೂಡ ಒಂದು ಚಮತ್ಕಾರ ವಿದ್ಯೆ ನಡೆಯುತ್ತದೆ. ಆದರೆ, ಹರಿಜನರಲ್ಲದವರನ್ನು ಏನು ಈ ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸೇರಿಸಬೇಕೆಂಬ ಅಭಿಪ್ರಾಯ ಬಂತೋ, ಅದನ್ನು ವಿರೋಧಿಸಬೇಕು. ಯಾರು ಅಸ್ಪೃಶ್ಯ ಕಳಂಕದಿಂದ ಪಾರಾಗಿದ್ದಾರೆ, ಅವರಿಗೆ ಬೇರೆ ಮೀಸಲು ಸ್ಥಾನ ಕೊಡಬಹುದು. ಉದಾಹರಣೆಗೆ ಬೋವಿ ಜನಾಂಗದವರಿಗೆ. ಇವರಲ್ಲಿ ಕೂಡ ಗುಡಿಸಲುಗಳಲ್ಲಿ ವಾಸಮಾಡತಕ್ಕ ಜನ ಇದ್ದಾರೆ, ಮತ್ತು ಬಹಳ ಹಿಂದುಳಿದವರು ಇದ್ದಾರೆ; ಜೊತೆಗೆ ಬಹಳ ಶ್ರೀಮಂತರೂ ಇದ್ದಾರೆ. ಬಸವಲಿಂಗಪ್ಪನವರನ್ನು ಸೋಲಿಸುವಂಥವರೂ ಇದ್ದಾರೆ. ಆದರೆ ಅದು ವೈಯಕ್ತಿಕ ಪ್ರಶ್ನೆಯಲ್ಲ, ಅಥವಾ ಒಬ್ಬ ಮೀಸಲೂ ಕ್ಷೇತ್ರದಿಂದ ಗೆದ್ದು ಬಂದುಬಿಟ್ಟು, ಆ ಕಾರಣಕ್ಕಾಗಿ ಶೆಡ್ಯೂಲ್ ಕಾಸ್ಟಿನಿಂದ ಹೊರಗೆ ಹೋಗಬೇಕೆಂಬುದು ಏನೂ ಇಲ್ಲ. ಇದು ಹಿಂದಿನಿಂದಲೂ ಬಂದ ಜನಾಂಗ. ಈ ಕುಷ್ಠ ರೋಗ ಎನ್ನತಕ್ಕ ಕಳಂಕ ಇಲ್ಲದಿದ್ದರೆ, ಹಿಂದೂ ಎನ್ನತಕ್ಕ ಒಂದೇ ಸಮಾಜವಿರುತಿತ್ತು. ಇದು ಬಹಳ ದಿವಸ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಕ್ರಾಂತಿ ಒಂದು ಕಾವಲು ತರದಲ್ಲಿ ನಿಂತಿದೆ. ಹಾಗೆ ನಾವು ಟ್ರೈಬ್ಸ್‌ಗೆ ಮೀಸಲು ಸ್ಥಾನ ಕೊಡಬೇಕು. ಇದನ್ನು 10 ವರ್ಷಗಳ ಕಾಲ ಮುಂದುವರಿಸಬೇಕಾದುದು ಅವಶ್ಯವಿದೆ. ಇನ್ನು ಆಂಗ್ಲೋ ಇಂಡಿಯನ್ಸ್ ಬಗ್ಗೆ ಪ್ರಥಮತಃ ಲೋಕಸಭೆಯಲ್ಲಿ ಮಧುಲಿಮೆಯೆಅವರು ಫ್ರಾಂಕ್ ಆಂಟೋನಿಯವರ ಬಗ್ಗೆ ಹೇಳಿದ್ದಾರೆ.—ಏನೆಂದರೆ, ನೀವು ಏನು ವಿದ್ಯಾಭ್ಯಾಸದಲ್ಲಿ ಕಡಿಮೆ ಇದ್ದೀರಿ? ಅಥವಾ ನಿಮಗೆ ಅಸ್ಪೃಶ್ಯತೆ ಇದೆಯೇ, ಅಥವಾ ಜೀವನದಲ್ಲಿ ತೀರಾ ನಿರ್ಗತಿಕ ಪರಿಸ್ಥಿತಿಯಲ್ಲಿ ಇದ್ದೀರಾ, ನಿಮಗೆ ಏಕೆ ಮೀಸಲು ಸ್ಥಾನ? ಎಂದು ಪ್ರಶ್ನೆ ಮಾಡಿದ್ದಾರೆ. ಅದೇ ಒಂದು ವಿಷಯದ ಬಗ್ಗೆ ಮಾನ್ಯ ನಾಗಪ್ಪನವರು ಈ ಒಂದು ನಿರ್ಣಯಕ್ಕೆ ತಿದ್ದುಪಡಿಯನ್ನು ಸೂಚಿಸಿದ್ದಾರೆ. ನನಗೆ ತಿಳಿದ ಪ್ರಕಾರ ಅವರೆಲ್ಲರೂ ಬಡವರಿಲ್ಲದಿರಬಹುದು, ಎಲ್ಲರೂ ಅವಿದ್ಯಾವಂತರಿಲ್ಲದಿರಬಹುದು; ಮತ್ತು ಎಲ್ಲರಿಗಿಂತ ಹೆಚ್ಚಾಗಿ ಫ್ರಾಂಕ್ ಅಂಟೋನಿಯವರಂತಹ ಅಥವಾ ಈ ಸಭೆಗೆ ನಾಮಿನೇಟ್ ಆಗಿರತಕ್ಕಂತಹ ಮಹಿಳಾ ಸದಸ್ಯೆಯರಂತಹವರನ್ನು ಯಾವ ದೃಷ್ಟಿಯಿಂದಲೂ ಹಿಂದುಳಿದವರೆಂದು ಹೇಳುವುದಕ್ಕಾಗುವುದಿಲ್ಲ. ಅವರು ಯಾವ ಸಾರ್ವಜನಿಕ ಕ್ಷೇತ್ರದಿಂದಲಾದರೂ ನಿಂತು, ಯಾವ ಅಸೆಂಬ್ಲಿಗೋ, ರಾಜ್ಯಸಭೆಗೋ, ಲೋಕಸಭೆಗೋ, ಅಥವಾ ವಿಧಾನಪರಿಷತ್ತಿಗೋ, ಆರಿಸಿ ಬರುವುದಕ್ಕೆ ಎಲ್ಲಾ ಅರ್ಹತೆಗಳೂ ಇವೆ. ಆದಾಗ್ಯೂ ಕೂಡ ನಾಗಾ ಲ್ಯಾಂಡಿನಲ್ಲಿರತಕ್ಕಂತಹ ಅಸ್ಸಾಮಿನಲ್ಲಿರತಕ್ಕಂತಹ ಅಥವಾ ಬೇರೆ ಕಾರಣಗಳಿಂದ ಒಂದು ರಕ್ತ ಸಂಬಂಧದಿಂದ ಆಂಗ್ಲೋ ಇಂಡಿಯನ್ ಆಗಿರತಕ್ಕವರು ಏನು ಇದ್ದಾರೆ, ಅವರಿಗೆ ಕೆಲವು ಕಾಲ ಸಂರಕ್ಷಣೆಯನ್ನು ಕೊಡಬೇಕೆನ್ನುವ ಒಂದು ವಾದವನ್ನು ನಾವು ಒಪ್ಪಬೇಕಾಗುತ್ತದೆ. ಇದರಲ್ಲಿ ಏನು ಅಪಾಯವಿದೆ ಎಂದರೆ ಕಡಿಮೆ ಸಂಖ್ಯೆಯವರು ನಾವು ಅಂತ ಅನ್ನುವ ಕಾಲಕ್ಕೆ ತಮಗೆ ಮೀಸಲು ಸ್ಥಾನ ಕೊಟ್ಟರೆ ರಾಮಕೃಷ್ಣ ಹೆಗ್ಗಡೆಯವರಿಗೂ ಕೊಡಲೇಬೇಕು.

4-00 P.M.

ಶ್ರೀ ರಾಮಕೃಷ್ಣ ಹೆಗಡೆ.—ಏಕೆ?

ಶ್ರೀ ಎಸ್. ಗೋಪಾಲಗೌಡ.—ಏಕೆಂದರೆ ತಾವು ಕಡಿಮೆ ಸಂಖ್ಯೆಯಲ್ಲಿದ್ದೀರಿ. ನಮ್ಮಲ್ಲಿ ಕಳೆದ ಸೆನ್ಸಸ್ ಪ್ರಕಾರ ಯಾರ್ಯಾರು ಮೈನಾರಿಟಿ ಎಂದು ಹೇಳುತ್ತಾರೆಯೋ—ಯಾವುದೇ ಕ್ಷೇತ್ರದಲ್ಲಿ ಆಗಲಿ—ಅವರಿಗೆ ಮೀಸಲು ಕೊಡಬೇಕಾಗುತ್ತದೆ, ಕೆಲವು ಜನಾಂಗಕ್ಕೆ ಸಿಕ್ಕಿದೆ. ಒಂದೊಂದು ಕ್ಷೇತ್ರದಲ್ಲಿ 20-30 ಮನೆಗಳು ಇರತಕ್ಕ ಜನಾಂಗಗಳು ಬಹಳ ಇವೆ. ಬಡತನವನ್ನು ಕ್ರೈಟೀರಿಯನ್ ಆಗಿಟ್ಟುಕೊಳ್ಳುತ್ತೀರಾ? ಅಸ್ಪೃಶ್ಯತೆಯನ್ನು ಕ್ರೈಟೀರಿಯನ್ ಆಗಿಟ್ಟುಕೊಳ್ಳುತ್ತೀರಾ? ಅವಿದ್ಯಾವಂತಿಕೆಯನ್ನು ಕ್ರೈಟೀರಿಯನ್ನಾಗಿಟ್ಟುಕೊಳ್ಳುತ್ತೀರಾ? ಯಾವುದು ನಿಮ್ಮ ಮೂಲಭೂತವಾದ ಅಳತೆಗೋಲು? ಬರೀ ಆರ್ಥಿಕ, ವಿದ್ಯಾಭ್ಯಾಸ ಇವುಗಳನ್ನು ಗಣನೆಗೆ ಇಟ್ಟುಕೊಳ್ಳುತ್ತೀರಾ? ಇದು ಬಹಳ ದೊಡ್ಡ ಪ್ರಶ್ನೆ. ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ, ಈ 23ನೇ ತಿದ್ದುಪಡಿಯನ್ನು ಬಹಳ ಅವಸರದಿಂದ ಲೋಕ ಸಭೆಯಲ್ಲಿ ತಂದಿದ್ದಾರೆ, ರಾಜ್ಯ ಸಭೆಯವರದೂ ಒದಿದೆ, ಲೋಕ ಸಭೆಯವರದೂ ಒದಿದೆ. ದೇಶದ ದೃಷ್ಟಿಯಿಂದ ಇನ್ನೂ 10 ವರ್ಷಗಳ ಕಾಲ ಈ ಸೌಲಭ್ಯವನ್ನು ಮುಂದುವರಿಸಬೇಕು ಅಂತ ಅನ್ನುವುದಾದರೂ, ಕೇವಲ ಕೆಲವು ಸ್ಥಾನಗಳನ್ನು ಅವರಿಗೆ ಕೊಟ್ಟರೆ ಅವರವರಲ್ಲಿ ಸ್ಪರ್ಧೆ ನಡೆದು

ಅವರಲ್ಲಿ ಒಬ್ಬನನ್ನು ಗೆಲ್ಲಿಸಿಕೊಂಡು ಅವನ ಬೆಂಬಲವನ್ನು ಪಡೆದು ನಾವು ರಾಜ್ಯವಾಳಬೇಕೆಂಬ ಒಂದು ಕೇವಲ ರಾಜಕೀಯ ದೃಷ್ಟಿಕೋಣ ಇದರಲ್ಲಿ ಇರುವುದಾದರೆ ಇದು ಸಮರ್ಥನೀಯವಾದ ತಿದ್ದುಪಡಿಯಾಗುವುದಿಲ್ಲ. ಇವತ್ತು ನಾವು ರಾಜ್ಯಾಂಗದತ್ತವಾಗಿ ಕೆಲವು ಸ್ಥಾನಗಳನ್ನು ಮೀಸಲಾಗಿ ಕೊಟ್ಟಿದ್ದೇವೆ. ಅದರ ಜೊತೆಗೆ ಈ ಗಾಂಧಿ ಜನ್ಮಶತಾಬ್ಧಿ ಅಂತ ಹೇಳಿ ದೇಶ ವಿದೇಶಗಳಲ್ಲಿ ಕಂಠ ಬಿರಿಯುವಂತೆ ಒಂದೇ ಸಮನೆ ಕೂಗುತ್ತಾ ಇದ್ದೇವೆ. ಈ ಕಾರ್ಯವನ್ನು ಕಾಯಾವಾಚಾಮನಸಾ ಒಪ್ಪಿಕೊಂಡು—ಯಾವ ಮಾನಸಿಕವಾದ ರಿಸರ್ವೇಷನ್ ಇಲ್ಲದೆ ಅಯ್ಯೋ ಅಯ್ಯೋ ಅಂತ ಅಂದುಕೊಳ್ಳದೆ ಈ ಒಂದು ಕಳಂಕವನ್ನು ತೊಡೆದುಹಾಕಿದರೆ ಒಳ್ಳೆಯದು. ವಿದ್ಯಾಭ್ಯಾಸವನ್ನು ಕೊಟ್ಟು, ಅಧಿಕಾರವನ್ನು ಕೊಟ್ಟು ಅವರಿಗೆ ಕೊಟ್ಟಿರತಕ್ಕ ಎಲ್ಲಾ ಸೌಲತ್ತುಗಳನ್ನೂ ಸರ್ಕಾರದವರು ಉದಾರವಾಗಿ ಕೊಟ್ಟರೆ ಈ ಹತ್ತು ವರ್ಷಗಳಲ್ಲಿ ಈ ಒಂದು ಜನಾಂಗ —ಅದೇನೂ ಒಬ್ಬರು ಇಬ್ಬರು ಅಲ್ಲ ಅವರಿಗೇ ಬೇರೆ ಸ್ಥಾನವನ್ನೂ ಕೂಡ ಕೇಳುತ್ತಾ ಇದ್ದಾರೆ ಅಷ್ಟರಮಟ್ಟಿಗೆ ಹೋಗಿದೆ ಈ ವಿಷಯ. ಇಂತಹ ದುರ್ಘಟನೆಯಿಂದ ರಾಷ್ಟ್ರವನ್ನು ರಕ್ಷಿಸಿ ಈ 53 ಕೋಟಿ ಜನ—ಭಾರತೀಯರು ಅಂತ ತಾವು ಹೇಳುತ್ತೀರಿ ಯಾರು ಅಂತ ನಮಗೆ ಇನ್ನೂ ಗೊತ್ತಿಲ್ಲ —ಭಾರತೀಯರು ಅಂತ ನಾವು ಅನ್ನಿಸಿಕೊಳ್ಳಬೇಕಾದರೆ ಮತ್ತಷ್ಟು ಕೆಲಸಗಳನ್ನು ನಾವು ಮಾಡಬೇಕಾಗಿದೆ. ಇವತ್ತು ಕೆಲವರಿಗೆ ಕೊಟ್ಟಿರತಕ್ಕ ಈ ಸೌಲಭ್ಯಗಳನ್ನೂ ಕೂಡ ಕೊಟ್ಟಿಲ್ಲ. ಸ್ಥಳೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೀರಲ್ಲಾ ಅವರನ್ನು ಒಂದು ಆರ್ಡಿನೆನ್ಸ್ ಮೇಲೆ ಖಾಯಂ ಮಾಡಿದ ಮೇಲೆ ಮತ್ತೆ 7 ಸಾವಿರ ಜನರನ್ನು ಆಯ್ಕೆ ಮಾಡಿದ್ದಿರಲ್ಲಾ ಅದರಲ್ಲಿ ಎಲ್ಲಾ ಕಡೆಯೂ ರಾಜ್ಯಾಂಗ ದತ್ತವಾಗಿ ಕೊಟ್ಟಿರತಕ್ಕ 18 ಶೇಕಡಾವಾರನ್ನು ಎಲ್ಲ ಅಧಿಕಾರಿಗಳೂ ಅನುಸರಿಸಿದ್ದಾರೆಯೇ ಎಂಬ ಮಾತನ್ನು ಕೇಳಿ ಆಗ ಗೊತ್ತಾಗುತ್ತದೆ. ಚಪ್ರಾಸಿ ಕೆಲಸ, ರಸ್ತೆ ಗುಡಿಸುವ ಕೆಲಸ, ಪಾಯಖಾನೆ ತೆಗೆಯುವ ಕೆಲಸ ಇಂತಹ ಕೆಲಸಕ್ಕೆ ಯಾರೂ ಬರುವುದಿಲ್ಲ ಅಂತ ಗೊತ್ತಾದಮೇಲೆ ಅಲ್ಲಿ ಒಬ್ಬನನ್ನು ನೇಮಕ ಮಾಡುವುದು. ಬೇರೆ ಕೆಲಸಕ್ಕೆ ನೇಮಕ ಮಾಡುವಾಗಲೆಲ್ಲಾ ಉತ್ತಮರು ಸಿಕ್ಕುವುದರಿಂದ ಬೇಕಾದವರು ಸಿಕ್ಕುವುದರಿಂದ ಇವರನ್ನು ಕೈಬಿಡುವುದು ಈ ಒಂದು ನಾಟಕ ಈ 20 ವರ್ಷದಲ್ಲಿ ನಡೆದಿದೆ. ನಾನು ನೋಡಿರುವುದು ಇದು, ಇದು ವ್ಯಥೆಪಟ್ಟಿರುವಂತಹ ವಿಷಯ. ಇದು ಕಣ್ಣೊರೆಸುವಂತಹ ಕೆಲಸ, ಏಳಿಗೆಯಾಗತಕ್ಕ ಕೆಲಸವಲ್ಲ, ಇದನ್ನು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಕೆಲವು ಮಾತುಗಳನ್ನು ಹೇಳಿ ನಮ್ಮ ರಾಜ್ಯಸರ್ಕಾರದವರೂ ಕೂಡ ಈ ತಿದ್ದುಪಡಿಗೆ ಔಪಚಾರಿಕವಾಗಿ ಬೆಂಬಲ ನೀಡುವ ಸಂದರ್ಭದಲ್ಲಿ ನಾನು ಏನು ಕೆಲವು ಮಾತುಗಳನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತಂದಿದ್ದೇನೆ ಇವುಗಳನ್ನು ಕಾರ್ಯಾಚರಣೆ ಮಾಡುವುದಕ್ಕೆ ಕೆಲವು ಹೊಸ ಹೊಸ ಅಜ್ಞೆಗಳನ್ನು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಬೇಕೆಂದು ಹೇಳಿ ನಾನು ಈ ನಿರ್ಣಯಕ್ಕೆ ಬೆಂಬಲ ನೀಡುತ್ತೇನೆ.

Mr. SPEAKER.—Before proceeding further, I may bring to the notice of the hon. Members that requests have been made to me that today the House may rise at 6 P.M. The reason assigned is that there is a function to facilitate the Governor on his 64th Birth-day. May I know whether we can adjourn at 6 O' clock ?

HON. MEMBERS.—Yes.

Mr. SPEAKER.—With respect to the resolution, I want to say a word. Probably there is a sort of unanimity on this measure. This is something that ought to have been done and it has been explained by Sri Gopala Gowda. If other hon. member also wants to speak, they may do so for a short duration. This Bill had been already passed in the Parliament and it has only to be ratified by this House here. Therefore, it is not necessary to repeat the arguments. I hope the hon. Members will finish this within an hour.

We are sitting up to 31st of this month and only 9 days are available. The House will discuss Motion of the Thanks and Probably at that time hon. Members can urge these things in detail. A request is also made by important leaders of the P.S.P. that they want to attend their party conference and we should enable them to go.

Sri H. SIDDAVEERAPPA.—Why not put all the agenda and say we finish it?

Mr. SPEAKER.—I leave the matter to the hon. Members. If the hon. Member wants to sit longer, I presume that cannot be any objection to that.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಸಭೆಯೊಳಗೆ ಕಾರ್ಯಕಲಾಪಗಳು ನಡೆಯುತ್ತ ಇರುವುದು, ಸರ್ಕಾರದವರು ಎಷ್ಟು ದಿವಸ ಮಾಡಬೇಕೋ ಅಷ್ಟು ದಿವಸಕ್ಕೆ ಮತ್ತು ಯಾವಯಾವ ವಿಷಯ ಮಾತನಾಡಬೇಕು ಅಷ್ಟಕ್ಕೆ ಮಾತ್ರ ಎನ್ನತಕ್ಕದಾದರೆ ಈ ಅಸೆಂಬ್ಲಿ ಇರುವುದಕ್ಕಿಂತ ಅದನ್ನು ಮುಚ್ಚುವುದೇ ಲೇಸು. ರಾಜ್ಯಪಾಲರ ಭಾಷಣ 60 ಪುಟಗಳ ದೊಡ್ಡ ಪುಸ್ತಕವಾಗಿದ್ದು ಅದರ ಮೇಲಿನ ಚರ್ಚೆಗೆ ನಾಲ್ಕು ದಿವಸ ಅವಕಾಶ ಕೊಟ್ಟು ಮಾತನಾಡಿ ಎಂದು ಹೇಳಿ, ಅದರ ಜೊತೆಗೆ ಯಾವ ವಿಷಯ ಬಂದರೂ ಅದರಮೇಲೆ ಮಾತನಾಡಬಹುದಲ್ಲ ಎಂದು ಹೇಳುತ್ತ ಬಂದರೆ ಯಾವ ಶಾಸನವೂ ಬೇಕಾಗಿಲ್ಲ, ಯಾವ ನಿಬಂಧನೆಯೂ ಬೇಕಾಗಿಲ್ಲ. ಬಜೆಟ್ ಅಧಿವೇಶನ ಒಂದನ್ನು ಮಾತ್ರ ಕರೆದು ಯಾರು ಏನು ಬೇಕಾದರೂ ಮಾಡಿ ಎಂದು ಹತ್ತು ದಿನಗಳಿಗೆ ಅಧಿವೇಶನವನ್ನು ಮುಚ್ಚುವುದು ತಾನೇ ? ಆದುದರಿಂದ ದಯವಿಟ್ಟು ಈ ತರಹ ಪದೇ ಪದೇ ಹೇಳತಕ್ಕದ್ದು ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿ ರಾಜ್ಯಪಾಲರ ಭಾಷಣದಮೇಲೆ ಮಾತನಾಡಿ ಎಂದು ಹೇಳುವುದು ಅಷ್ಟೊಂದು ಉಚಿತವಾಗಿ ಕಾಣುವುದಿಲ್ಲ. It is not so. It is left to us where to speak, what to speak and when to speak. If the Government is not anxious to know the mind of the public and the mind of the Opposition, it it better that we close this Assembly than continue it. ನಿಲುವಳಿ ಸೂಚನೆಯನ್ನು ತಂದರೆ ರಾಜ್ಯಪಾಲರ ಭಾಷಣದಮೇಲೆ ಮಾತನಾಡಿ ಎಂದು ಹೇಳುತ್ತ ಬಂದರೆ ನಾವು ಇಲ್ಲಿಗೆ ಏಕೆ ಬರಬೇಕು? We know our responsibility. This sort of a thing should be put a stop to.

Mr. SPEAKER.—The position is not properly understood by the hon. Member Sri Channabasappa. I did not allow that luxury to myself. I only pointed out what transpired at the meeting of the Business Advisory committes. If the House wants to sit for a fortnight, I have got the least objection to it. Therefore, the excitement of the hon. Member Sri Channabasappa was not at all necessary.

Now I call upon Sri Duggappa. I think he will be able to express his views within 5 minutes.

Sri G. DUGGAPPA (Bharmasagara).—Kindly permit me to take some more time. ಸ್ವಾಮಿ, ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯವನ್ನು ಸ್ವಾಗತಿಸುತ್ತ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ತಮಗೆಲ್ಲ ಗೊತ್ತಿದ್ದಹಾಗೆ ಎರಡನೆಯ ಬಾರಿಗೆ ರಾಜ್ಯಾಂಗವನ್ನು ತಿದ್ದುಪಡಿ ಮಾಡತಕ್ಕ ಒಂದು ನಿರ್ಣಯಕ್ಕೆ ನಾವು ಇಲ್ಲಿ ಒಪ್ಪಿಗೆಯನ್ನು ಕೊಡತಕ್ಕದಾಗಿದೆ. ನಾನು ಹಿಂದುಳಿದ ವರ್ಗಗಳ ಪ್ರತಿನಿಧಿಯಾಗಿ, ನಾಲ್ಕು ಸಲ ಆರಿಸಿಬಂದಿರುವ ಸದಸ್ಯನಾಗಿ ಹೇಳಬೇಕಾದರೆ ಕೆಲವೊಂದು ನಿಷ್ಠುರವಾದ, ಆದರೂ ಸತ್ಯವಾದ ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ಸಾಮಾನ್ಯವಾಗಿ ಪರಿಶಿಷ್ಟ ವರ್ಗಗಳ ಹಿತ ರಕ್ಷಣೆಗಾಗಿ, ಅವರ ಅಭ್ಯುದಯಕ್ಕಾಗಿ ಈ ನಿರ್ಣಯವನ್ನು ತಂದಿದ್ದಾರೆ. ಈ ತಿದ್ದುಪಡಿಯನ್ನು ರಾಜ್ಯಾಂಗಕ್ಕೆ ತಂದಾಗ ಮಂತ್ರಿ ಗೋವಿಂದ ಮೆನನ್ ಅವರು ಒಂದು ಮಾತನ್ನು ಹೇಳಿದ್ದಾರೆ :

> "This system (caste system) under which a section of our community was treated as untouchables, a system under which a section of the community was treated, to use a word which we do not use nowadays, as Panchamas, a system which kept segregated a section of the Hindu community, existed for thousands of years and we have not yet found it possible to say that we have created a feeling of equality between them."

That was the main object of this move by the Central Government. ಸಮಾಜದಲ್ಲಿ ಈ ವರ್ಗದ ಜನ, ಸಮಾಜದ ಇನ್ನೊಂದು ವರ್ಗದ ಜನರಿಗೆ ನಾವು ಸರಿಸಮಾನರು ಎನ್ನುವ ಭಾವನೆಯನ್ನು ಹೊಂದುವುದಕ್ಕೆ, ಆ ಉದ್ದೇಶವನ್ನು ಸಾಧನೆ ಮಾಡುವ ಸಲುವಾಗಿ ಇಂಥ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ. ಅಂಥ ಸಾಧನೆಯನ್ನು ಮಾಡಿದ್ದೇವೆಯೇ ಎನ್ನುವುದನ್ನು ನಾವು ಈ ಹೊತ್ತು ಯೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಯಾರನ್ನು ಕೇಳಬೇಕು ಎಂದರೆ ಸಮಾಜದಲ್ಲಿರುವ ಸ್ಪೃಶ್ಯರನ್ನಲ್ಲ, ಅಸ್ಪೃಶ್ಯರನ್ನು ಕೇಳಬೇಕು. ಈಗಿರುವ ಪರಿಸ್ಥಿತಿಯನ್ನು ಕಣ್ಣಿನಿಂದ ನೋಡಿದರೆ ಆ ವಿಷಯವನ್ನು ಹೇಳುವುದೇ ಬೇಕಾಗಿಲ್ಲ, ಪರಿಸ್ಥಿತಿ ಇನ್ನೂ ಅಧೋಗತಿಗೆ ಹೋಗುತ್ತಿದೆ. ಇತ್ತೀಚೆಗೆ ರಾಷ್ಟ್ರದಲ್ಲಿ, ಅದರಲ್ಲಿಯೂ ಆಂಧ್ರ, ಮದ್ರಾಸ್ ರಾಜ್ಯಗಳಲ್ಲಿ ನಡೆದಿರುವುದನ್ನು ನೋಡಿದರೆ ಗೊತ್ತಾಗುತ್ತದೆ. ಅಷ್ಟೇಕೆ, ಮೈಸೂರು ರಾಜ್ಯವನ್ನು ತೆಗೆದುಕೊಂಡರೂ ನಮಗೆಲ್ಲಾ ಗೊತ್ತಿರುವಂತೆ ಸಿಡ್ಲೋಣಿ ಪ್ರಸಂಗದಿಂದ ಹಿಡಿದು ನಮಗೆ ಗೊತ್ತಿರುವ ಇತರ ಪ್ರಸಂಗಗಳನ್ನು ನೋಡಿದರೆ ಅಸ್ಪೃಶ್ಯತೆಯ ಕಳಂಕದಿಂದ ತೊಂದರೆ ಪಡುವುದು ಹಾಗಿರಲಿ, ಸಾವಿರಾರು ವರ್ಷಗಳಿಂದ ಹಾಗೆ ದೂರೀಕರಿಸಿರುವುದು ಹಾಗಿರಲಿ, ಇತ್ತೀಚೆಗೆ ಏನನ್ನು ನೋಡುತ್ತಿದ್ದೇವೆ, ಎಂದರೆ ಪರಿಶಿಷ್ಟ ವರ್ಗದವರನ್ನು ಸರಿಸಮಾನರು ಎಂದು ತಿಳಿಯುವುದಕ್ಕೆ ಬದಲಾಗಿ ಕಿರುಕುಳ ಕೊಡುವುದಕ್ಕೆ, ತೊಂದರೆ ಕೊಡುವುದಕ್ಕೆ, ವಿಚಿತ್ರ ರೀತಿಯ ಹಿಂಸೆಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ಈ ದೃಷ್ಟಿಯಿಂದ ಮಾತನಾಡುವುದಾದರೆ, ನಾನು ಸ್ವಲ್ಪ ವಿಸ್ತಾರವಾಗಿ ಹೇಳಬೇಕಾಗಿದೆ. ರಾಜ್ಯಾಂಗವನ್ನು ಬರೆಯತಕ್ಕ ಸಮಯದಲ್ಲಿ, ಅದಕ್ಕೆ ಕಾರಣಕರ್ತರಲ್ಲಿ ಒಬ್ಬರಾದ ಡಾಕ್ಟರ್ ಅಂಬೇಡ್ಕರ್ ಅವರು ಚುನಾವಣೆಗಳಲ್ಲಿ ಪರಿಶಿಷ್ಟ ವರ್ಗದವರಿಗೆ ಪ್ರತ್ಯೇಕ ಸ್ಥಾನ ಮೀಸಲಾಗಿಡಬೇಕೇ, ಬೇಡವೇ ಎನ್ನುವ ಪ್ರಶ್ನೆಯನ್ನು ತೆಗೆದುಕೊಂಡು ಅಸ್ಪೃಶ್ಯರು ಎಂದು ಯಾರನ್ನು ಪರಿಗಣಿಸುತ್ತೇವೆ ಅವರಿಗೆ ಒಂದು ಅವಕಾಶವನ್ನು ಕೊಟ್ಟು, ಅವರ ಪ್ರತಿನಿಧಿಗಳನ್ನು ಅವರೇ ಆರಿಸಿಕೊಳ್ಳತಕ್ಕ ಹಾಗೆ ಮಾಡಬೇಕು ಎನ್ನುವ ಒಂದು ಸಲಹೆಯನ್ನು ಮುಂದೆ ಇಟ್ಟರು. ಆಗ ಮಹಾತ್ಮರು ನಾನು ಇಂಥದಕ್ಕೆ ಒಪ್ಪುವುದಿಲ್ಲ ಆಮರಣಾಂತ ಉಪವಾಸ ಮಾಡುತ್ತೇನೆ, ನನ್ನ ವಾದಕ್ಕೆ ಒಪ್ಪಬೇಕು ಎಂದು ಹೇಳಿದರು. ಆ ಕಾರಣಗಳು ಬೇಕಾದಷ್ಟಿವೆ. ಅವನ್ನೆಲ್ಲ ಹೇಳುವುದಕ್ಕೆ ಕಾಲವಿಲ್ಲ. ಅಂಥ ಉತ್ಕಟ ಪರಿಸ್ಥಿತಿಯನ್ನು ನೆನಸಿಕೊಂಡು ಆಗಿನ ಕಾಲದಲ್ಲಿ ಡಾಕ್ಟರ್ ಅಂಬೇಡ್ಕರ್‌ರಂಥ ಮನುಷ್ಯರೂ ಸಹ ಮಹಾತ್ಮರ ವಾದಕ್ಕೆ ಒಪ್ಪಿಗೆಯನ್ನು ಕೊಟ್ಟರು. ಆಮೇಲೆ ರಾಜ್ಯಾಂಗ ಬಂತು. ಭಾರತಕ್ಕೆ ಸ್ವಾತಂತ್ರ್ಯ ಬಂದು 20 ವರ್ಷಗಳಾದಮೇಲೆ ನಮ್ಮ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ, ಮುಂದೆ ಹೋಗಿದೆಯೋ ಅಥವಾ ಹಿಂದೆ ಹೋಗಿದೆಯೇ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ. ಅಂದಮೇಲೆ ಆ ರಿಸರ್ವೇಷನ್ಸ್‌ನಿಂದ ಅನುಕೂಲವಾಗಿದೆಯೇ ಇಲ್ಲವೇ ? ಅನುಕೂಲವಾಗದೆ ಇದ್ದರೆ ಪರಿಶಿಷ್ಟ ವರ್ಗಗಳಿಗೆ ಇರುವ ರಕ್ಷಣೆಯನ್ನು ಮುಂದುವರಿಸಿಕೊಂಡು ಹೋಗಬೇಕೇ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಪರಿಶಿಷ್ಟ ವರ್ಗಗಳವರಿಗೆ ಅನುಕೂಲವಾಗುತ್ತದೆ ಎನ್ನುವ ಘನ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಆದರೆ ಕೇಂದ್ರ ಸರ್ಕಾರದಲ್ಲಿರತಕ್ಕ, ಅಧಿಕಾರವನ್ನು ವಹಿಸಿಕೊಂಡು ಸರ್ಕಾರವನ್ನು ನಡೆಸತಕ್ಕವರಿಗೇ ಒಂದು ಅನುಮಾನವಿದೆ. ಅದೇನೆಂದರೆ ಈ ಸಮಾಜದಲ್ಲಿರುವ ಪರಿಶಿಷ್ಟ ವರ್ಗದ ಜನರಲ್ಲಿ ನಾವೂ ಇತರರ ಸರಿಸಮಾನರು ಎನ್ನುವ ಭಾವನೆ ಬರುತ್ತದೆಯೋ ಇಲ್ಲವೋ ಎನ್ನುವ ಅನುಮಾನ. ನಾವು ಎಲ್ಲರೊಡನೆ ಸರಿಸಮಾನರು ಎಂಬ ಉದ್ದೇಶ ಸಾಧನೆ ಮಾಡಲು ಸಾಧ್ಯವಿದೆಯೇ ಇಲ್ಲವೇ? ಖಂಡಿತವಾಗಿ ಸಾಧನೆಯಾಗುವುದಿಲ್ಲ. ಯಾಕೆಂದರೆ ಚುನಾವಣೆಯಲ್ಲಿ ಸ್ವಾಭಾವಿಕವಾಗಿ ರಾಜಕೀಯ ಬಂದೇ ಬರುತ್ತದೆ. ಚರಿತ್ರಾರ್ಹವಾದ ಮೈಸೂರಿನ ರಾಜಕೀಯದಲ್ಲಿ ತಮ್ಮ ಸ್ವಪ್ರತಿಷ್ಠೆ ಬೆಳೆಸಿಕೊಳ್ಳಲು ಇದನ್ನು ರಾಜಕೀಯ ಮುಖಂಡರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಪರಿಶಿಷ್ಟ ವರ್ಗದ ಪ್ರತಿನಿಧಿಗಳನ್ನು ಇವರ ಕೈಯಲ್ಲ ಉಪಕರಣವಾಗಿ ಉಪಯೋಗಿಸಲ್ಪಟ್ಟಿದ್ದಾರೆ. ಒಬ್ಬ ಪರಿಶಿಷ್ಟ ವರ್ಗದ ವಿದ್ಯಾವಂತ ತರುಣನ ಬದಲಾಗಿ ಒಬ್ಬ ಎಪ್ಪತ್ತು ವರ್ಷದ ಪ್ರತಿನಿಧಿಯನ್ನು ಈ ಸಿಂಡಿಕೇಟ್ ಪಕ್ಷ ಚುನಾವಣೆಯಲ್ಲಿ ಆರಿಸಿದ್ದುಂಟು. ಹಿಂದುಳಿದವರಿಗೆ ಇರತಕ್ಕ ರಿಜರ್ವೇಷನ್ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ. ಈ ರೀತಿ ರಾಜಕೀಯ ಪಕ್ಷವು ಹಿಂದುಳಿದವರನ್ನು ತುಳೀತಾ ಇದ್ದಾರೆ. ಇದು ನನ್ನ ಸ್ವಂತ ಕಹಿ ಅನುಭವದಿಂದ ಹೇಳುತ್ತಿದ್ದೇನೆ. ಇದರಲ್ಲಿ ರಾಜಕೀಯ ತಂದು ಒಬ್ಬನ ವಿರೋಧವಾಗಿ ಇನ್ನೊಬ್ಬನನ್ನು ಎತ್ತಿಕಟ್ಟುತ್ತಾರೆ. ಇದಕ್ಕೆ ಪರಿಹಾರ ಏನು ? ನಮ್ಮ ರಾಜ್ಯಾಂಗವನ್ನು ಬರೆದ ಮಹಾ ಮೇಧಾವಿ ಮಹಾಶಯರವರು ಇದನ್ನು ಆಳವಾಗಿ ವಿಚಾರ ಮಾಡಿ 30 ವರ್ಷಗಳ ಹಿಂದೆಯೇ ಇದಕ್ಕೆ ಪರಿಹಾರ ಕಂಡು ಹಿಡಿದಿದ್ದಾರೆ. ಆದರೆ ಅದಕ್ಕೆ ಮಾನ್ಯತೆ ಬರಲಿಲ್ಲ. "Experience is a School, but its fee is very heavy". ಪರಿಶಿಷ್ಟ ವರ್ಗದ ಜನರ ಹಿತವನ್ನು ಸಾಧನೆ ಮಾಡುವುದಕ್ಕೆ ತಾವೇ ಪ್ರತಿನಿಧಿಸತಕ್ಕಂಥ ಕಾಲ ಬರಬೇಕು. ಪರಿಶಿಷ್ಟ ವರ್ಗದವರು ಓಟು ಹಾಕಿ ತಮ್ಮ ಪ್ರತಿನಿಧಿ

(Sri G. DUGGAPPA)

ಯನ್ನು ತಾವೇ ಪ್ರತ್ಯೇಕವಾಗಿ ಕಳಿಸುವಂತಾಗಬೇಕು. ಈ ರೀತಿಯಾದರೆ ಕೆಲವರಿಗೆ ಮಾತ್ರ ಮೂಗು ಮುರಿದುಕೊಂಡ ಹಾಗೆ ಆಗುತ್ತದೆ. ಸಪರೇಟ್ ಎಲೆಕ್ಟೋರೇಟ್ ಬರಬೇಕು. ಹೀಗಾದರೆ ನಮ್ಮ ದೇಶದ ಐದನೇ ಒಂದು ಭಾಗದಷ್ಟು ಜನ ಹಿಂದೂ ಸಮಾಜದಿಂದ ಹೊರಗಡೆ ಹೋಗುತ್ತಾರೆ ಎಂದು ಕೆಲವರು ಸಂದೇಹ ಪಡುತ್ತಾರೆ. ಇದರಿಂದ ನಾವೇನೂ ಪ್ರತ್ಯೇಕವಾದ ರಾಜ್ಯ ಕೇಳುತ್ತಿಲ್ಲ. ಸಾವಿರಾರು ವರ್ಷಗಳಿಂದ ಈ ಪ್ರಶ್ನೆ ದೇಶದ ಮುಂದೆ ಇದೆ. ಪ್ರತ್ಯೇಕವಾದ ರಾಜ್ಯ ಒಂದು ವೇಳೆ ಈಗ ಕೊಡದೇ ಇದ್ದರೆ ನಾವು ಕಿತ್ತುಕೊಳ್ಳುತ್ತೇವೆ. ಅದು ಬೇರೆ ವಿಚಾರ. ಈಗ ಒಂದು ಉದಾಹರಣೆ ಕೊಡುವುದಾದರೆ ಒಂದು ರೀತಿಯಲ್ಲಿ ನಮ್ಮ ರಾಜ್ಯಾಂಗದಲ್ಲಿ ಸಪರೇಟ್ ಎಲೆಕ್ಟೋರೇಟ್ ಇದೆ. ಟೀಚರ್ಸ್ ಕಾನ್‌ಸ್ಟಿಟ್ಯುಯೆನ್ಸಿ ಇದೆ, ಬೇರೆ ಬೇರೆ ಕಾನ್‌ಸ್ಟಿಟ್ಯುಯೆನ್ಸಿಗಳು ಇವೆ. ಅವರವರು ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳಿಸಿಕೊಡುತ್ತಾರೆ. ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲವೇ? ಸಪರೇಟ್ ಎಲೆಕ್ಟೋರೇಟ್ ಆದರೆ ಅವರು ಬೇರೆಯಾಗುತ್ತಾರೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಆದುದರಿಂದ ಇದರ ಹಿನ್ನೆಲೆ ಏನು ಇದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ಇದರ ಉದ್ದೇಶ ಏನಿದೆ ಎಂದು ತಿಳಿದುಕೊಳ್ಳತಕ್ಕದ್ದು ಅಗತ್ಯ. ಇದಕ್ಕಾಗಿ ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ರೀತಿಯ ಅರ್ಧಂಬರ್ಧ ಮನಸ್ಸಿನಿಂದ ಖಂಡಿತವಾಗಿ ಏನೂ ಉಪಯೋಗವಾಗುವುದಿಲ್ಲ. ಈಗ ಇರತಕ್ಕಂಥ ಸೌಲಭ್ಯದಿಂದ ಸರಿ ಸಮಾನರು ಎಂಬ ಭಾವನೆ ಬರುತ್ತದೆಯೇ? ರಾಜಕೀಯದಲ್ಲಿ ಸರಿಸಮಾನತೆ ಬಂದಿದೆ. ಇದು ಹೇಗೆ ಆಗಿದೆ ಎಂದರೆ ಬೇರೆಯವರ ಓಟು ದೊರೆತರೆ ಮಾತ್ರ ನನ್ನಂಥವರು ಚುನಾವಣೆಯಲ್ಲಿ ಆರಿಸಿ ಬರುತ್ತೇವೆ. ಇಲ್ಲದಿದ್ದರೆ ಇಲ್ಲ. ಇದರಲ್ಲಿ ರಾಜಕೀಯ ಮಾಡಿ ಇನ್ನೊಬ್ಬನನ್ನು ಎತ್ತಿಕಟ್ಟಿ ಮತ್ತೊಬ್ಬ ದುಗ್ಗಪ್ಪನನ್ನು ಹುಟ್ಟಿಸಿ ನನ್ನಂಥವನನ್ನು ತುಳಿಸಿಬಿಡುತ್ತಾರೆ. ನಮ್ಮ ಪ್ರಯತ್ನ ನಿಂತುಹೋಗುತ್ತದೆ. ನಾವು ಸರಿ ಸಮಾನರು ಎಂಬ ಭಾವನೇ ಬರಬೇಕಾದರೆ ಸರಿಯಾದ ಪ್ರತಿನಿಧಿಯನ್ನು ಆರಿಸಿ ಕಳುಹಿಸಬೇಕು. ಅಂದರೆ ನಮ್ಮ ಉದ್ಧಾರವಾಗುತ್ತದೆ. ಇದರಿಂದ ಬಾಬಾ ಸಾಹೇಬ, ಅಂಬೇಡ್ಕರ್ ಅವರ ಆತ್ಮಕ್ಕೆ ಶಾಂತಿ ದೊರೆತೀತು, ಅವರ ಕನಸು ನನಸಾದೀತು. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಮಾನ್ಯ ಸಭಾಪತಿಗಳವರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

4-30 P.M.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ಸರ್ಕಾರದವರು ಮಂಡಿಸಿರತಕ್ಕಂಥ ಈ ರಾಜ್ಯಾಂಗದ 23ನೇ ತಿದ್ದುಪಡಿಯನ್ನು ಸ್ವಾಗತಿಸುತ್ತಾ ಒಂದೆರಡು ಸೂಚನೆಗಳನ್ನು ಹೇಳುತ್ತೇನೆ.

ಈವೊತ್ತಿನ ದಿವಸ ಈ ತಿದ್ದುಪಡಿಗೆ ಬೆಂಬಲ ಸೂಚಿಸುವ ಸಲುವಾಗಿ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಮೈಸೂರ್ ರಾಜ್ಯ ಶಾಖೆಯ ವತಿಯಿಂದ ಸುಮಾರು 10 ಸಾವಿರ ಜನರ ಒಂದು ಡೆಮಾನ್‌ಸ್ಟ್ರೇಷನ್‌ನ್ನು ನಾವು ಮಾಡಿದ್ದೇವೆ. ಮತ್ತು ಮುಖ್ಯವಾಗಿ ಈ ಉದ್ದೇಶ ಏನು ಎಂದರೆ ರಿಪಬ್ಲಿಕ್ ಪಾರ್ಟಿ ಆಫ್ ಇಂಡಿಯಾ ಕಳೆದ 15 ವರ್ಷದಿಂದಲೂ ಪೊಲಿಟಿಕಲ್ ರಿಜರ್ವೇಷನ್ ಇರಬಾರದು ಎಂದು ವಿರೋಧ ಮಾಡಿದ್ದೇವೆ. ಈ ರೀತಿ ಕಾದಿಟ್ಟ ಸ್ಥಳಗಳು ಇರಬಾರದು ಎಂಬ ಧೋರಣೆಯನ್ನು ಈಗ್ಗೆ ಕಾದಿಟ್ಟ ಸ್ಥಳಗಳು ಬೇಕೇ ಬೇಕು ಎನ್ನುವ ತತ್ವವನ್ನು ನಾವು ಅಂಗೀಕರಿಸಿದ್ದೇವೆ. ಅದೇ ಪ್ರಕಾರ ನಮ್ಮ ಧೋರಣೆಯನ್ನು ಕೂಡ ಘೋಷಿಸಿದ್ದೇವೆ.

ಮುಖ್ಯವಾಗಿ ಮುಂದಿನ 10 ವರ್ಷಕ್ಕೋಸ್ಕರ ಹರಿಜನರಿಗೆ ಕಾದಿಟ್ಟ ಸ್ಥಳಗಳು ಮುಂದುವರಿಯಬೇಕು ಎಂಬ ತಿದ್ದುಪಡಿ ಪಾರ್ಲಿಮೆಂಟ್ ಪಾಸು ಮಾಡಿದೆ ಮತ್ತು ಇದನ್ನು ಅಸೆಂಬ್ಲಿ ಮುಂದೆ ಅನುಮತಿ ಪಡೆಯುವುದಕ್ಕೆ (ratification) ಬಂದಿದೆ. ಈ 22 ವರ್ಷದ ಅನುಭವ ನೋಡಿದಾಗ ಈ ರಿಸರ್ವೇಷನ್ ಹರಿಜನರಿಗೆ ಎಳ್ಳಷ್ಟೂ ಲಾಭವಾಗಿಲ್ಲ. ಈವೊತ್ತು ನಾಡಿನ ಮೂಲೆಮೂಲೆಯಲ್ಲಿ ಅನ್ಯಾಯ, ಅತ್ಯಾಚಾರ ಆಗುತ್ತಾ ಇದೆ. ರಾಜ್ಯಾಂಗದತ್ತ ಮಾಡಿದ ಈ ಮೂಲಭೂತವಾದ ಹಕ್ಕುಗಳಾಗಲಿ ಅಥವಾ ಉಳಿದ ಸೌಲಭ್ಯವಾಗಲಿ ಹರಿಜನರಿಗೆ ಸರಿಯಾಗಿ ಸಿಕ್ಕುತ್ತಿದೆಯೇ ಅಂದರೆ ಅದು ಕನಸಿನ ಮಾತಾಗಿದೆ. ಮೈಸೂರು ರಾಜ್ಯದಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇದೆ, ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಇದ್ದಾರೆ, ಬೇಕಾದಷ್ಟು ಸ್ಕಾಲರ್‌ಷಿಪ್‌ಗಳನ್ನು ಕೊಡುತ್ತಾ ಇದ್ದಾರೆ. ಆದರೂ ಸಹ ಹರಿಜನರಿಗೆ ಕೇವಲ 5 ಪರ್ಸೆಂಟ್ ಕೂಡ ಸರಿಯಾದ ನ್ಯಾಯ ದೊರಕಿಲ್ಲ. ಈವೊತ್ತಿನ ದಿವಸ ಮೈಸೂರು ಸ್ಟೇಟ್‌ನಲ್ಲಿ ಕಲ್ಯಾಣ

ಸಚಿವರು ಮತ್ತು ಉಪಸಚಿವರು ಇಬ್ಬರು ಮಂತ್ರಿಗಳು ಇದ್ದಾರೆ. ಅವರು ಹೇಳಿದ ಮಾತನ್ನು ಯಾವ ಡೆಪ್ಯೂಟಿ ಕಮೀಷನರ್ ಆಫೀಸಿನ ಪೀವನ್ ಕೂಡ ಬೆರೆ ಕೊಡುವುದಿ . ಹೀಗಾದರೆ ನಮ್ಮ ಹರಿಜನರು ಉದ್ಧಾರವಾಗುತ್ತಾರೆಯೇ ? ಆಫೀಸಿನಿಂದ ಫೋನ್, ಟ್ರಂಕ್‌ಕಾಲ್ ಮಾಡಿಸಿದರೂ ಕೂಡ ಯಾವ ಸಣ್ಣ ಕೆಲಸವೂ ಕೂಡ ಆಗುವುದಿಲ್ಲ. ನನ್ನ ಈ 22 ವರ್ಷದ ಅನುಭವದಿಂದ ಈ ಒಂದು ಹೊಸ ನಿರ್ಧಾರಕ್ಕೆ ಬಂದಿದ್ದೇನೆ. 1932ನೇ ಇಸವಿಯಲ್ಲಿ ಡಾಕ್ಟರ್ ಅಂಬೇಡ್ಕರ್‌ರವರು ರೌಂಡ್ ಟೇಬಲ್ ಕಾನ್‌ಫರೆನ್ಸಿನಲ್ಲಿ (Separate Electorate for Scheduled caste people) ಪ್ರತ್ಯೇಕ ಮತದಾರ ಕ್ಷೇತ್ರ ಹರಿಜನರಿಗೆ ಇರಬೇಕೆಂದು ಘೋಷಣೆ ಮಾಡಿದರು. ಅದರಿಂದಲೇ ಹರಿಜನೋದ್ಧಾರ ಸಾಧ್ಯ ಎಂದು ತೀರ್ಮಾನ ಮಾಡಿದ್ದರು. ಈ ರೀತಿ ದುಂಡ ಮೇಜಿನ ಪರಿಷತ್ತಿನಲ್ಲಿ ಕೋಮುವಾರ ತೀರ್ಪು ಆಗಿದ್ದರಿಂದ ಪ್ರತ್ಯೇಕ ಮತದಾರ ಪದ್ಧತಿ ಜಾರಿಗೆ ಭಾರತದಲ್ಲಿ ಬಂದರೆ ಹಿಂದೂ ಧರ್ಮದಿಂದ ಹರಿಜನರು ದೂರವಾಗಿರುತ್ತಾರೆ ಅನ್ನುವ ಕಾರಣ ಮಹಾತ್ಮಾ ಗಾಂಧೀಜಿಯವರು ಪೂನಾದಲ್ಲಿ ಉಪವಾಸ ಕೈಕೊಂಡರು. ಹೀಗೆ 20 ದಿವಸ ಉಪವಾಸವನ್ನು ಕೈಕೊಂಡಾಗ ಅವರನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಬೇಕಾದಷ್ಟು ಜನ ಹಿಂದೂ ರಾಜಕೀಯ ಧುರೀಣರು ಮತ್ತು ಇತರರೂ ಡಾಕ್ಟರ್ ಅಂಬೇಡ್ಕರ್‌ರವರ ಹತ್ತಿರ ಹೋಗಿ ಗಾಂಧೀಜಿ ಪ್ರಾಣ ದಾನ ಮಾಡಬೇಕೆಂದು ವಿನಂತಿ ಮಾಡಿಕೊಂಡರು. ಹರಿಜನ ಉದ್ಧಾರವನ್ನು ನಮ್ಮ ಮೇಲೆ ಬಿಡಿ. ಹರಿಜನರ ಉದ್ಧಾರದ ತತ್ವವನ್ನು ನಾವು ಒಪ್ಪಿಕೊಳ್ಳುತ್ತೇವೆ. ಗಾಂಧೀಜಿಯವರ ಪ್ರಾಣ ಉಳಿಸಿ ಎಂದು ಹೇಳಿದಮೇಲೆ ಪೂನಾ ಕರಾರಕ್ಕೆ ಡಾ॥ ಅಂಬೇಡ್ಕರ್‌ರು ಸಹಿ ಮಾಡಿ ಗಾಂಧೀಜೀಯವರ ಪ್ರಾಣ ಉಳಿಸಿದರು. ಈ 22 ವರ್ಷಗಳ ಕಾಲವಾದರೂ ಏನೂ ಕಾರ್ಯ ಸಾಧಿಸಲಿಲ್ಲ. ಇನ್ನೂ 10 ವರ್ಷ ಈ ಕಾದಿಟ್ಟ ಸ್ಥಳಗಳನ್ನು ಮುಂದುವರಿಸಿದರೂ ಸಾಲದು. ಆದ್ದರಿಂದ ಹರಿಜನರ ಉದ್ಧಾರವು ಆರ್ಥಿಕವಾಗಿ—ಸಾಮಾಜಿಕವಾಗಿ ಆಗುವವರೆಗೆ ಈ ರಿಸರ್ವೇಷನ್ ಇರಬೇಕು. 22 ವರ್ಷದಿಂದಲೂ ನೀವು ಗಾಂಧೀಜಿಯವರ ತತ್ವವನ್ನು ಒಪ್ಪಿಕೊಂಡಿಲ್ಲ. ಮತ್ತು ಒಪ್ಪಿಕೊಂಡರೂ ಜಾರಿಗೆ ತಂದಿಲ್ಲ. ಆದ್ದರಿಂದ 32 ವರುಷದ ಹಿಂದೆ ಡಾ. ಅಂಬೇಡ್‌ಕರ್‌ರವರು ಪ್ರತ್ಯೇಕ ಮತದಾರರ ಪದ್ಧತಿಯಿಂದಲೇ ಹರಿಜನರ ಕಲ್ಯಾಣ ಅಂತ ಹೇಳಿದ್ದಾರೆ. ಆದ್ದರಿಂದ ಇಂದು ಮತ್ತೆ ನಾವು ಪ್ರತ್ಯೇಕ ಮತದಾರರ ಪದ್ಧತಿ ಜಾರಿಗೆ ತರಬೇಕು ಅಂತಾ ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರದ ಮುಖಾಂತರ ಒತ್ತಾಯಿಸುತ್ತೇನೆ. We cannot achieve the aims by the Political reservations without the Separate Electorate for Harijans in this country. So we demand separate Electorate for Harijans. ಈ 22 ವರ್ಷಗಳಿಂದಲೂ ಹರಿಜನರೂ ಏನೂ ಉದ್ಧಾರವಾಗಿಲ್ಲ ಮತ್ತು Hindus never take cognition of the Harijans and their welfare in this country. ಆದ್ದರಿಂದ ಹರಿಜನರ ಓಟುಗಳಿಂದ ಹರಿಜನ ಪ್ರತಿನಿಧಿಗಳಾಗಿ ಆರಿಸಿ ಹೋದರೆ ಅವರಿಗೆ ಬೇಕಾದ ಸೌಲಭ್ಯಗಳನ್ನು ದೊರಕಿಸಿಕೊಡುವ ಶಕ್ತಿ ಬರುತ್ತದೆ. ನಮ್ಮಲ್ಲೂ ಇಬ್ಬರು ಹರಿಜನ ಮಂತ್ರಿಗಳು ಇದ್ದಾರೆ. ಹರಿಜನ ಮಂತ್ರಿಗಳೇ ಪ್ರತ್ಯೇಕ ಮತದಾರ ಪದ್ಧತಿಯಿಂದ ಆರಿಸಿ ಬಂದಿದ್ದರೆ ಹರಿಜನರಿಗಾಗಿ ಹೋರಾಡುತ್ತಿದ್ದರು. ಸಂಯುಕ್ತ ಮತದಾರ ಪದ್ಧತಿ ಈಗ್ಗೆ ಜಾರಿಯಲ್ಲಿ ಇರುವುದರಿಂದ ಈ ಹರಿಜನ ಮಂತ್ರಿಗಳು ಸರಿಯಾಗಿ ಹರಿಜನರ ಏಳಿಗೆ ಬಗ್ಗೆ ಹೋರಾಡುತ್ತಾ ಇಲ್ಲ. ಇನ್ನು ಉಳಿದ ಮಂತ್ರಿಗಳಿಗೆ ಹರಿಜನರ ಬಗ್ಗೆ ಅನುಕಂಪ ಬರುವುದು ಸಾಧ್ಯವೇ ಇಲ್ಲ. ಇದಕ್ಕೆ ಹರಿಜನ ಮಂತ್ರಿಗಳೇ ಪ್ರತ್ಯೇಕ ಮತದಾರ ಪದ್ಧತಿಯಿಂದ ಆರಿಸಿ ಬಂದರೆ ಕೊನೆಯವರೆಗೂ ಹರಿಜನರ ಕಷ್ಟಸುಖಗಳನ್ನು ನೋಡಲು ಅನುಕೂಲವಾಗುತ್ತದೆ. ಮತ್ತು ಕೇವಲ ಹರಿಜನರ ಓಟುಗಳಿಂದ ಇವರು ಆರಿಸಿ ಬಂದದ್ದು ಆದರೆ ಹರಿಜನರ ಕಲ್ಯಾಣ ಸಾಧ್ಯವಾಗುತ್ತದೆ. ಆದರೆ ಈ 22 ವರ್ಷದಿಂದಲೂ ಸಂಯುಕ್ತ ಮತದಾರಪದ್ಧತಿಯಿಂದ ಕಾದಿಟ್ಟ ಸ್ಥಳಗಳಿಗೆ ಹರಿಜನ ಪ್ರತಿನಿಧಿಗಳು ಲೋಕಸಭೆ ಮತ್ತು ಅಸೆಂಬ್ಲಿಗಳಿಗೆ ಹೋಗುವುದರಿಂದ ಹರಿಜನರ ಏಳಿಗೆಗಾಗಿ ಹೋರಾಟ ಮಾಡುವ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಒಂದುವೇಳೆ ಸ್ವತಂತ್ರ ಮತದಾರ ಸಂಘದಿಂದ ಆರಿಸಿ ಹೋದರೆ ಹರಿಜನರ ಉದ್ಧಾರಕ್ಕಾಗಿ ಶ್ರಮಿಸುವ ಶಕ್ತಿ ಬರುತ್ತದೆ.

ಶ್ರೀ ಎ. ಮುನಿಯಪ್ಪ.—ನಿಜವಾಗಿಯೂ ಪಾರ್ಲಿಮೆಂಟಿಗೆ ಯಾರೂ ಹೋಗಲಿಲ್ಲ ಎಂದು ಹೇಳುತ್ತೀರಿ. ಹಾಗಾದರೆ ಮಂತ್ರಿಗಳಾಗಲಿ, ಸದಸ್ಯರೇ ಆಗಲಿ ಹೇಗೆ ಹೋಗಿದ್ದಾರೆ ?

ಶ್ರೀ ಎಸ್. ಎಸ್. ಅರಕೇರಿ.—ಹರಿಜನರ ಉದ್ಧಾರದ ಗುರಿಗಳನ್ನು ಮುಟ್ಟುವುದಕ್ಕೆ ಹರಿಜನರ ಓಟುಗಳಿಂದ ಹೋದರೆ ಆ ಗುರಿ ಸಾಧನೆಯಾಗುತ್ತದೆ. ಬರೀ ಹೆಸರಿಗೆ ಹೋದ ಮಾತ್ರಕ್ಕೆ ಅವರಿಂದ ಹರಿಜನರ ಉದ್ಧಾರವಾಗುವುದಿಲ್ಲ. ಈ ಪೊಲಿಟಿಕಲ್ ರಿಸರ್ವೇಷನ್ ಆಗಲಿ ಅಥವಾ ರಾಜಕೀಯ ಸವಲತ್ತುಗಳು ಮುಂದುವರಿಸಿದರೆ ಅವರ ಸ್ಥಿತಿ ಉತ್ತಮವಾಗುವುದಿಲ್ಲ. ವೇದ

(ಶ್ರೀ ಎಸ್. ಎಸ್. ಅರಕೇರಿ)

ಉಪನಿಷತ್ತುಗಳ ಹೆಸರಿನಿಂದ ಹರಿಜನರನ್ನು ಹಿಂದೂ ಸಮಾಜದಿಂದ ದೂರ ಇಟ್ಟಿದ್ದಾರೆ. ಅನೇಕ ಕಡೆಗಳಲ್ಲಿ ಈವೊತ್ತಿನವರೆಗೂ ಸಾರ್ವಜನಿಕ ಬಾವಿಗಳಲ್ಲಿ ಹರಿಜನರಿಗೆ ನೀರು ಮುಟ್ಟುವ ಅವಕಾಶ ವಿಲ್ಲ. ಈ ರೀತಿ ಆದರೆ ಹಿಂದೂ ಸಮಾಜದಲ್ಲಿ ಹರಿಜನರು ಉಳಿಯುವುದಿಲ್ಲ. ಇದನ್ನು ಕಳಕಳಿಯಿಂದ ಹೇಳುತ್ತೇನೆ. ಆದುದರಿಂದ ಮೈಸೂರು ಸರಕಾರ ಪ್ರತ್ಯೇಕ ಮತದಾನ ಪದ್ಧತಿ ಜಾರಿಗೆ ತರಲು ರೆಕಮೆಂಡ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು ; ಎಂದು ಕೇಳಿಕೊಳ್ಳುತ್ತೇನೆ. ಎಲ್ಲ. ಎಂ. ಎಲ್. ಎ. ಮತ್ತು ಸಮಾಜಿಕ ಕಾರ್ಯಕರ್ತರು ಎಲ್ಲರೂ ಕೂಡ ಹರಿಜನರ ಉದ್ಧಾರಕ್ಕೆ ಳಕಳಿಯಿಂದ ಮಾಡುವ ಪ್ರತಿಜ್ಞೆಯನ್ನು ಮಾಡಲಿ ಎಂದು ನಾನು ವಿನಂತಿಸುತ್ತೇನೆ. ಇಲ್ಲದೇ ಹೋದರೆ 100ಕ್ಕೆ 25 ಪರ್ಸೆಂಟು ಹರಿಜನರು ಇರುವ ಭಾರತದಲ್ಲಿ ಅಂದರೆ 15 ಕೋಟಿ ಜನಸಂಖ್ಯೆ ಹರಿಜನರು ಇದ್ದಾರೆ. ಹರಿಜನರ ಉದ್ಧಾರ ಆಗದಿದ್ದರೆ ಹಿಂದೂ ಸಮಾಜ ಉಳಿಯುವುದಿಲ್ಲ. It is the bounden duty of each and every member of this House to implement the provisions of the constitution and safeguards to the Schedule Castes. ಆದುದರಿಂದ ಈ ಹರಿಜನರ ಸಲುವಾಗಿ ಇವರ ಏಳಿಗೆಗಾಗಿ ನಿರ್ದಿಷ್ಟವಾದ ಸ್ಥಾನಗಳನ್ನು ಮೀಸಲಾಗಿಟ್ಟು ಅದಕ್ಕೆ ಎಲ್ಲರೂ ಶ್ರಮಿಸಬೇಕು ಎಂದು ಹೇಳುತ್ತೇನೆ. ಅಲ್ಲದೆ ಕೇವಲ 10 ವರ್ಷಕ್ಕೆ ಮುಂದುವರಿಸಿದರೆ ಸಾಲದು ಅವರು ಉದ್ಧಾರವಾಗುವವರೆಗೂ ಇದು ಮುಂದುವರಿಯತಕ್ಕದ್ದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಮತ್ತು ಪಾರ್ಲಿಮೆಂಟರಿ ಇಲಾಖೆಯ ಮಂತ್ರಿಗಳು ಇಲ್ಲಿ ಮಂಡಿಸಿರತಕ್ಕಂಥ ನಿರ್ಣಯದ ಬಗ್ಗೆ ಈಗಾಗಲೇ ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ, ನಿರ್ಣಯ ಅಂಗೀಕಾರವಾಗಿದೆ ಇಲ್ಲಿ ಅನುಮೋದನೆ ಬಗ್ಗೆ ಮಾತ್ರ ಇವರು ಮಂಡಿಸಿದ್ದಾರೆ. ಈ ವಿಧವಾದ ವಿಶೇಷ ರಿಯಾಯಿತಿಯ ಮೀಸಲು ಸ್ಥಾನ ಒದಗಿಸತಕ್ಕಂಥ ನೀತಿಯು ರಾಜ್ಯಕ್ಕಾಗಲಿ ಅಥವಾ ರಾಷ್ಟ್ರಕ್ಕಾಗಲಿ ಗೌರವವನ್ನು ತರತಕ್ಕಂಥದ್ದಲ್ಲ. ಇದರ ಹಿನ್ನೆಲೆ ಏನು ಎಂಬುದನ್ನು ಯೋಚನೆ ಮಾಡುವುದಾದರೆ 20 ವರ್ಷಗಳ ಹಿಂದೆ ಅಂದರೆ 1950 ನೇ ಜನವರಿ 26 ನೇ ತಾರೀಕಿನಂದು ದಿನ ಜಾರಿಗೆಬಂದಂಥ ರಾಜ್ಯಾಂಗದಲ್ಲಿ ಏನೇನು ವಿಶೇಷ ರಿಯಾಯಿತಿಗಳು ಇವೆಯೋ ಅವುಗಳನ್ನು ಈ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜನಾಂಗಕ್ಕೆ ನೈಜವಾದ ರೀತಿಯಲ್ಲಿ ಒದಗಿಸಿಲ್ಲ. ಈ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಮಾಡಿದ್ದಾರೆಯೇ ? ಇವರ ಸಾಮಾಜಿಕ ಸ್ಥಿತಿ, ಇವರ ಆರ್ಥಿಕ ಸ್ಥಿತಿ, ಇವರ ವಿದ್ಯಾಭ್ಯಾಸದ ಪ್ರಗತಿ, ಎಲ್ಲವೂ ರಾಜ್ಯದ ಮತ್ತು ರಾಷ್ಟ್ರದ ಇತರ ಜನಾಂಗಗಳ ಮಟ್ಟಕ್ಕೆ ಬಂದಿದೆಯೇ ? ಇಲ್ಲ ಅದನ್ನು ಸರಿಯಾದ ರೀತಿಯಲ್ಲಿ ಅಳವಡಿಸಿ ಕಾನೂನು ಬದ್ಧವಾಗಿ ರೀತಿಯಲ್ಲಿ ಕೊಡತಕ್ಕಂಥ ರಿಯಾಯಿತಿಗಳನ್ನು ಆ ಜನಾಂಗಕ್ಕೆ ಕೊಡದಿದ್ದರೆ ಇಂತ ತಿದ್ದುಪಡಿಗಳನ್ನು 10 ವರ್ಷಕ್ಕೊಮ್ಮೆ ತರುವಂಥ ನೀತಿ ನಿಜವಾಗಿಯೂ ಒಪ್ಪುವಂತಹುದಲ್ಲ ರಾಷ್ಟ್ರದ 1/5 ಭಾಗದ ಜನಸಂಖ್ಯೆಯಲ್ಲಿರುವ ಹರಿಜನರು ರಾಷ್ಟ್ರದ ಬೆನ್ನುಮೂಳೆಯಾಗಿದ್ದಾರೆ. ಅವರೆಲ್ಲರ ಪ್ರಗತಿ ''ರಾಷ್ಟ್ರದ ಪ್ರಗತಿ'' ಮತ್ತು ಹರಿಜನರ ಸಮಸ್ಯೆ ''ರಾಷ್ಟ್ರದ ಸಮಸ್ಯೆ'', ಎಂದು ತಿಳಿದುಕೊಂಡು ಹರಿಜನರ ಉದ್ಧಾರಕ್ಕೆ ಕೆಲಸ ಮಾಡಬೇಕಾಗಿದೆ. ಇದು ಆಗದೇ ಹೋದರೆ ರಾಷ್ಟ್ರದ ಉದ್ಧಾರವಿಲ್ಲ. ಆದ್ದರಿಂದ ತಿದ್ದುಪಡಿಗೆ ಈ ಮಾನ್ಯ ಸದಸ್ಯರೆಲ್ಲ ಯಾವ ವಿರೋಧವನ್ನೂ ಸೂಚಿಸದೆ ಸರ್ವಾನುಮತದಿಂದ ಒಪ್ಪಿಗೆ ನೀಡುತ್ತಾರೆಂದು ನನಗೆ ಪೂರ್ಣ ನಂಬಿಕೆ ಇದೆ. ಈ ವಿಧಾನಸಭೆಯಲ್ಲಿ 216 ಸದಸ್ಯರು ಇದ್ದಾರೆ ಅದರಲ್ಲಿ 27 ಜನ ಇಲ್ಲಿಗೆ ಪ್ರತಿನಿಧಿಗಳಾಗಿ ಮೀಸಲುಸ್ಥಾನದಿಂದ ಬಂದಿದ್ದೇವೆ. ಈ ಮೀಸಲು ಸ್ಥಾನದಲ್ಲಿ ಚುನಾವಣೆಯಾಗಿ ಇಲ್ಲಿ ಬಂದು ಕುಳಿತ ಮಾತ್ರಕ್ಕೇ ಹರಿಜನರ ಅಭಿವೃದ್ಧಿ ಆಯಿತು ಎನ್ನುವುದು ಶುದ್ಧ ಸುಳ್ಳು ಈ ಆಡಳಿತದಲ್ಲಿರತಕ್ಕಂಥ ಪ್ರತಿನಿಧಿಗಳು, ಸರ್ಕಾರವನ್ನು ನಡೆಸತಕ್ಕಂಥ ಪ್ರತಿನಿಧಿಗಳು ವಿಶೇಷವಾದ ರಿಯಾಯಿತಿಗಳನ್ನು ಕಡ್ಡಾಯವಾಗಿ ಅವರಿಗೆ ಕೊಟ್ಟು ಅವರ ಸೇವೆ ಮಾಡಬೇಕು. ಹಿಂದೂ ಸಮಾಜದಲ್ಲಿದ್ದ ಈ ರಾಜ್ಯದಲ್ಲಿ 42 ಲಕ್ಷ ಹರಿಜನ ಗಿರಿಜನ ಜನಸಂಖ್ಯೆಯಲ್ಲಿ 6 ಲಕ್ಷ ಜನ ಕ್ರೈಸ್ತರಾಗಿ ಮತಾಂತರ ಹೊಂದಿದ್ದಾರೆ. ಇಂದಿಗೂ ಕೂಡ, ಅಸ್ಪೃಶ್ಯರು ಸ್ಪೃಶ್ಯರು ನೀರು ತೆಗೆದುಕೊಳ್ಳುವ ಬಾವಿಯಲ್ಲಿ ನೀರು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಸ್ಪೃಶ್ಯರು ಅಸ್ಪೃಶ್ಯರನ್ನು ಅಣ್ಣ ತಮ್ಮಂದಿರಂತೆ ನೋಡಿಕೊಳ್ಳುತ್ತಿಲ್ಲ, ಮಾನವೀಯತೆಯನ್ನೂ ತೋರಿಸುತ್ತಿಲ್ಲ. ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ''ಅಸ್ಪೃಶ್ಯತೆ'' ಎನ್ನುವುದು ಚೆನ್ನಾಗಿ ಎದ್ದು ತಾಂಡವ ವಾಡುತ್ತಿದೆ. ಅಸ್ಪೃಶ್ಯರ ಕೊಲೆಗಳಾಗುತ್ತಿವೆ. The so called Hindus are treating these untouchables like cats and dogs in the streets. ಈತರಹದ ಒಂದು

ಮನೋಭಾವನೆ ಬೆಳೆದು ಬರುತ್ತಿದೆ. ಇದಕ್ಕಾಗಿ ರಾಜ್ಯಾಂಗದಲ್ಲಿ ಕೊಟ್ಟಿರುವ ವಿಶೇಷರೀತಿ ನೀತಿಯನ್ನು ಸರಕಾರದವರು ಪಾಲಿಸಿಕೊಂಡು ಬರಬೇಕಾಗಿದೆ. ವಿಶೇಷ ರಿಯಾಯತಿಗಳನ್ನು ಕೊಟ್ಟಿದ್ದರೂ ಸಹ ಅವರ ಸ್ಥಾನ ಮಾನಗಳ ಪ್ರಗತಿ ಇನ್ನೂ ಹೆಚ್ಚು ಆಗಿಲ್ಲ, ಕೇವಲ ಶೇಕಡಾ 18 ರಷ್ಟು ಸ್ಥಾನಗಳನ್ನು ಸರಕಾರ ಇಲ್ಲಿ ಮೀಸಲಾಗಿರಿಸಿ ಎಂದು ಹೇಳಿದರೆ ಇದರಿಂದ ಇವರಿಗೇನೂ ಹೆಚ್ಚು ಪ್ರಯೋಜನವಾಗುವುದಿಲ್ಲ. 1939 ನೇ ಇಸವಿಯಿಂದ ಮಹಾತ್ಮ ಗಾಂಧಿಯವರು ಹಾಗೂ ಡಾಕ್ಟರ್ ಅಂಬೇಡ್ಕರ್‌ರವರೂ ಇವರಿಗಾಗಿ ಒಳ್ಳೆಯ ಕೆಲಸ ಮಾಡಿದ್ದರು. ಅಲ್ಲದೆ ಪೂನಾ ಪ್ಯಾಕ್ಟ್ ಜಾರಿಗೆ ಬಂದಿತು ಇದರಂತೆ ಎಲ್ಲರೂ ಅಣ್ಣ ತಮ್ಮಂದಿರಂತೆ ಬಾಳಬೇಕು ಎಂದು ಹೇಳಿದರು. ಆದರೆ ಇಂದು ಅಂತಹ ಭಾವನೆಗೆ ವಿರೋಧವಾಗಿ ಸಮಾಜದಲ್ಲಿ ಕಹಿಬೆಳೆದು ಬಂದು ಎಲ್ಲರೂ ಅಣ್ಣ ತಮ್ಮಂದಿರಂತೆ ಬಾಳುತ್ತಿಲ್ಲ! ಇದಕ್ಕಾಗಿ ರಾಜ್ಯ ಸರಕಾರದವರು ಇಂತಹ ಒಂದು ತಿದ್ದುಪಡಿಯನ್ನು ತಂದು ಈಗಿನ ಸನ್ನಿವೇಶದಲ್ಲಿ ಅನುಸೂಚಿತ ವರ್ಗಗಳವರಿಗೆ ಕೆಲಸ ಕೊಡುವುದರಲ್ಲಿ ಶೇಕಡಾ 18ರಿಂದ ಶೇಕಡಾ 25 ರವರಗೆ ಸರ್ಕಾರಿ ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡಿ ಕೊಡಬೇಕು ಎಂದು ಹೇಳುತ್ತಿದ್ದೇವೆ. ಇಂದು ಇವರ ಆರ್ಥಿಕ ಸ್ಥಿತಿ ಹೇಗಿದೆ? ಇವರಿಗೆ ಸಾಕಷ್ಟು ಉತ್ತೇಜನ ಸಿಗುತ್ತಿಲ್ಲ. ಇದಕ್ಕಾಗಿ ಪ್ರತಿ ಇಲಾಖೆಯಲ್ಲೂ ಲಿಬರಲೈಸ್ಡ್ ಸ್ಕೀಂಗಳನ್ನು ಇವರಿಗಾಗಿ ಹಾಕಿಕೊಂಡು ಸಹಾಯ ಮಾಡಬೇಕು. ಮತ್ತು ಇಲ್ಲಿರುವ ಸುಮಾರು 26 ಜನರ ಮಂತ್ರಿಮಂಡಲದಲ್ಲಿ ಕೇವಲ ಇಬ್ಬರು ಮಾತ್ರ ಹಿಂದುಳಿದ ವರ್ಗದವರ ಸೇವೆಗೆ ನಿರತರಾಗಿದ್ದಾರೆ, ನಮ್ಮ ಸರಕಾರದ ಎಲ್ಲಾ ಮಂತ್ರಿಗಳು ತಮ್ಮ ಜನಾಂಗದ ಅಭಿವೃದ್ಧಿ ಮಾಡುವಂತಾಗಬೇಕು? ಎಲ್ಲ ಇಲಾಖೆಗಳಲ್ಲೂ ಇವರಿಗೆ ಸಾಕಷ್ಟು ರಿಯಾಯಿತಿಗಳನ್ನು ಕೊಟ್ಟು ಇವರ ಸ್ಥಾನಮಾನಗಳನ್ನು ಹೆಚ್ಚು ಮಾಡುವ ಪ್ರಯತ್ನ ಮಾಡಬೇಕು. "ಎಕನಾಮಿಕಲ್ ಇಲ್ ವಿಲ್ಸ್" ಎನ್ನುವುದು ಹೋಗಬೇಕು. ಇದು ಹೋಗದಿದ್ದರೆ ಇವರೆಲ್ಲರೂ ಕಮ್ಯುನಿಸ್ಟರುಗಳಾಗುವರು. ಇಂದು ಇರುವ ಸರಕಾರಿ ಅಧಿಕಾರಿಗಳಲ್ಲಿ ತಾರತಮ್ಯದ ಅನೇಕ ನ್ಯೂನತೆಗಳಿವೆ. ಇದನ್ನೆಲ್ಲಾ ಸರಿಪಡಿಸಬೇಕು ಗಾಂಧಿಯವರು ಹೇಳಿದಂತಹ ರಾಮ ರಾಜ್ಯ ವಾಗಬೇಕಾದರೆ, ಸುಖೀ ರಾಜ್ಯವಾಗಬೇಕಾದರೆ ಮತ್ತು ಪ್ರಜಾ ಪ್ರಭುತ್ವ ಉಳಿಯಬೇಕಾದರ ಇಂತಹ ತಾರತಮ್ಯದ ನೀತಿಗಳನ್ನು ಮೊದಲು ಸರಕಾರದವರು. ಹೋಗಲಾಡಿಸಬೇಕು. ಇವರನ್ನು ರಾಜ್ಯದ ಇತರ ಜನಾಂಗದ ಮಟ್ಟಕ್ಕೆ ತರಲು ಪ್ರಯತ್ನ ಮಾಡಬೇಕು. ಹೆಚ್ಚು ಹೆಚ್ಚಾಗಿ ಹಣವನ್ನು ಬಜೆಟಿನ್‌ಲ್ಲಿ ಪಡೆದುಕೊಂಡು ಇಂತಹ ಹಿಂದುಳಿದ ಜನಾಂಗದವರಿಗಾಗಿ ಸಹಾಯ ಮಾಡಬೇಕು, ಸಮಾಜವಾದದ ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಜನರಿಗೆ ನಂಬಿಕೆ ಇಂದು ಹೋಗಿದೆ. ಅವರು ಈ ಪ್ರಜಾಪ್ರಭುತ್ವದ ಆಡಳಿತವನ್ನು ಬಿಟ್ಟು ಮುಂದೆ ಇವರೆಲ್ಲಾ ಕಮ್ಯುನಿಸ್ಟರಾಗುವ ಕಾಲ ಸನ್ನಿಹಿತ ವಾಗಿದೆ, ಇದಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ, ರಾಷ್ಟ್ರದ ಜನತೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರತಕ್ಕ ಸಮಾಜವಾದದ ಸಮಾಜ ರಚನೆಮಾಡತಕ್ಕದ್ದು ಪ್ರತಿಯೊಬ್ಬರು ಇವರ ಬಗ್ಗೆ ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಲು ಮತ್ತು ಸುವ್ಯವಸ್ಥೆಯಿಂದ ಆಡಳಿತ ನಡೆಸಿ ಸರ್ವ ಪ್ರಯತ್ನ ಮಾಡಿ ರಾಜ್ಯದ ಈ ಜನರ ಕಲ್ಯಾಣವನ್ನು ಸಾಧಿಸಲು ಪ್ರಯತ್ನಮಾಡಬೇಕು. ಕೇವಲ ಇಲ್ಲಿ ಹೇಳಿರುವಂತೆ ಬರೀ ಸ್ಥಾನಗಳನ್ನು ಮೀಸಲಾಗಿಡುವುದರಿಂದ ಇವರ ಅಭಿವೃದ್ಧಿ ಯಾಗುವುದಿಲ್ಲ. ಇವರಿಗಾಗಿ ಚುನಾಯಿತ ಸ್ಥಾನಗಳಲ್ಲಿ ಮೇಲ್ಮನೆಗಳಲ್ಲೂ ಮೀಸಲಾಗಿಟ್ಟು ಅವರನ್ನು ಅಲ್ಲಿಯೂ ಚುನಾಯಿಸುವುದರಿಂದ ಇವರ ಪ್ರಗತಿ ಹೆಚ್ಚುತ್ತಿದೆ. ಕೇವಲ ಹರಿಜನರನ್ನು ಹಾಗೂ ಗಿರಿಜನರನ್ನು ಶಾಸನಸಭೆ ಹಾಗೂ ಪಾರ್ಲಿಮೆಂಟಿಗೆ ಚುನಾಯಿಸುವುದರಿಂದ ಅವರನ್ನು ಉದ್ಧಾರ ಮಾಡಿದಂತೆ ಆಗುವುದಿಲ್ಲ. ರಾಜ್ಯಾಂಗಕ್ಕೆ ಇಲ್ಲಿ ತಿದ್ದುಪಡಿ ಇದೆ. ಇಲ್ಲಿ ಅಲ್ಪ ಸಂಖ್ಯಾತರಿಗೂ ಸ್ಥಾನಗಳನ್ನು ಮೀಸಲಾಗಿ ಇಡಿಸಿದೆ. ಇದರಿಂದ ಹರಿಜನರನ್ನು ಗಿರಿಜನರನ್ನು ಹಾಗು ಅಲ್ಪಸಂಖ್ಯಾತರನ್ನು ಉದ್ಧಾರ ಮಾಡಿದಂತಾಗುವುದಿಲ್ಲ. ಈಚೆಗೆ ಮೈಸೂರು ರಾಜ್ಯದಲ್ಲಿ ಆದಿದ್ರಾವಿಡ ಕ್ರಿಶ್ಚಿಯನ್ ಕಾನ್‌ಫರೆನ್ಸ್ ನಡೆದಾಗ ಅಲ್ಲಿ ಹೇಳಿದಂತೆ ಆದಿ ದ್ರಾವಿಡರು ಸರಿಯಾಗಿ ಮುಂದುವರಿದಿಲ್ಲ, ಎಂದು ಅವರು ಒಂದು ಮನವಿ ಸಲ್ಲಸಿದಾಗ ಅವರಲ್ಲಿ ಸುಮಾರು ಆರು ಲಕ್ಷ ಜನರು ಆದಿ ದ್ರಾವಿಡರು ಅಂದರೆ ಹರಿಜನ ಹಾಗು ಗಿರಿಜನರು ಮತಾಂತರ ಹೊಂದಿದ್ದಾರೆ. ಇವರೆಲ್ಲರೂ ಇತರ ಹಿಂದೂ ಜನರೊಡನೆ ಕಲೆತು ಹಿಂದೂ ಸಮಾಜದಲ್ಲಿ ಸಹೃದತೆಯಿಂದ ಬಾಳಲು ಅವಕಾಶವನ್ನು ಸಮಾಜ ಹಾಗೂ ಸರ್ಕಾರ ಮಾಡಿಕೊಟ್ಟಿಲ್ಲ ಅವರಿಗೆ ಅಂಟಿಕೊಂಡಿರುವ ಬಡತನದ ಜೀವನವೇ ಕಾರಣ. ಇಂತಹ ಬಡಜನರ ಉದ್ಧಾರ ಮಾಡುವುದು ಈ ಸರಕಾರದ ಮೊದಲು ಕರ್ತವ್ಯ It is the primary duty of the Government ಆದ್ದರಿಂದ ಈ ಸರಕಾರ ಇಂತಹ ಜನರ ಉದ್ಧಾರ ಮಾಡಲು ಎಲ್ಲಾ ಮಟ್ಟದಲ್ಲೂ ಉದ್ಯೋಗಾವಕಾಶಗಳನ್ನು ಕಲ್ಪಿಸಿ, ಹೆಚ್ಚು ಹೆಚ್ಚು ಹಣವನ್ನು ಇವರ ಉಪಯೋಗಕ್ಕಾಗಿ ಬಜೆಟ್‌ನಲ್ಲಿ ಕೊಟ್ಟು ಇವರ ಸರ್ವತೋಮುಖವಾದ ಅಭಿವೃದ್ಧಿಗೆ ಸಹಾಯ ಮಾಡಿ ಇವರನ್ನು ನಾಗರಿಕರನ್ನಾಗಿ ಮಾಡುವ ಜವಾಬುದಾರಿ ಹೊರಬೇಕು. ಇಲ್ಲಿ ಮಾನ್ಯ ಮಂತ್ರಿಗಳು ತಂದಿರುವ ಈ ತಿದ್ದುಪಡಿಯನ್ನು ಹೃತ್ಪೂರ್ವಕವಾಗಿ ಪುಷ್ಟೀಕರಿಸುತ್ತಾ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

''ಹರಿಜನರ ಉದ್ಧಾರವೇ ರಾಷ್ಟ್ರದ ಉದ್ಧಾರ'' ಎಂದು ಮಹಾತ್ಮಾ ಗಾಂಧಿಯವರು ಹೇಳಿದಂತೆ ಅವರ ಕನಸು ನನಸಾಗಲಿ ಮತ್ತು ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ಮಾನ್ಯ ಸಭೆಯು ಎಲ್ಲ ಸದಸ್ಯರೂ ಇಂತಹ ಒಂದು ತಿದ್ದುಪಡಿಗೆ ಒಮ್ಮತದಿಂದ ಬೆಂಬಲ ನೀಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ (ಮೂಡಿಗೆರೆ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಸಭೆಯ ಮುಂದೆ ಇರತಕ್ಕ ತಿದ್ದುಪಡಿಯ ಬಗ್ಗೆ ನನ್ನ ವೈಯುಕ್ತಿಕವಾದ ಅಭಿಪ್ರಾಯವನ್ನು ಕೊಡಲು ಇಚ್ಛಿಪಡುತ್ತೇನೆ. ಇದು ನನ್ನ ಪಕ್ಷದ ಅಭಿಪ್ರಾಯವಲ್ಲ. ನನ್ನ ಸ್ವಂತವಾದ ಅಭಿಪ್ರಾಯವನ್ನು ಈ ಸಭೆಯ ಮುಂದೆ ಇಡಲು ಪ್ರಯತ್ನ ಮಾಡುತ್ತೇನೆ. ಸ್ವಾಮಿ, ನಮ್ಮ ಮುಂದೆ ಇರತಕ್ಕ ಈ ತಿದ್ದುಪಡಿ ರಾಜ್ಯಾಂಗದ ಆರ್ಟಿಕಲ್ 333—334 ನೇ ಕಲಂಗಾಗಿ ತಂದಿರುವ ತಿದ್ದುಪಡಿ 333 ನೇ ಕಲಂನಲ್ಲಿ ಅನುಸೂಚಿತ ವರ್ಗದವರಿಗಾಗಿ ಕೊಡುತ್ತಿದ್ದ ಸವಲತ್ತುಗಳನ್ನು ಸ್ವಲ್ಪಮಟ್ಟಿಗೆ ಮೊಟಕು ಮಾಡಲಾಗಿದೆ. ಹೆಚ್ಚು ಸಂಖ್ಯೆಯಲ್ಲಿ ಪ್ರತಿನಿಧಿಗಳನ್ನು ನಾಮಿನೇಷನ್ ಮಾಡತಕ್ಕ ಪದ್ಧತಿ ಇತ್ತು. ಈ ತಿದ್ದುಪಡಿ ಪ್ರಕಾರ ಒಬ್ಬೊಬ್ಬ ಸದಸ್ಯರನ್ನು ಮಾತ್ರ ನಾಮಕರಣ ಮಾಡಬೇಕೆಂದು ಇಲ್ಲ ಹೇಳಲಾಗಿದೆ. 334 ರ ಪ್ರಕಾರ ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್ಸ್‌ಗಳವರಿಗೆ ರಾಜ್ಯದಲ್ಲಿ ಸ್ಥಾನಗಳನ್ನು ಇನ್ನೂ ಹತ್ತು ವರ್ಷಕಾಲ ಮೀಸಲಾಗಿರಬೇಕು ಎಂದು ಇಲ್ಲಿ ತರಲಾಗಿದೆ ಎಂದರೆ ಇದನ್ನು 30 ವರ್ಷಗಳ ಕಾಲ ಮುಂದುವರಿಸಬೇಕು ಎಂದು ಅರ್ಥವಾಗುತ್ತದೆ. ಮೊದಲು ಈ ವರ್ಗದವರಿಗೆ ಹತ್ತು ವರ್ಷಗಳು ಮೀಸಲಾಗಿಡಬೇಕು ಎಂದರು. ಅನಂತರ 1960 ನೇ ಜನವರಿ 26 ರಿಂದ ಪುನಃ ಹತ್ತು ವರ್ಷ ಕಾಲ ಮುಂದುವರಿಸಬೇಕು ಎಂದು ಮಾಡಿದ್ದುದನ್ನು ಈಗ ಮತ್ತೆ ಇನ್ನೂ ಹತ್ತು ವರ್ಷಗಳು ಮುಂದುವರಿಸಬೇಕೆಂದು ತಂದಿದ್ದಾರೆ. ಇಂತಹ ತಿದ್ದುಪಡಿ ತರುವ ಪ್ರಮೇಯವಾದರೂ ಏನಿತ್ತು ಎಂದು ಕೇಳಬೇಕಾಗಿದೆ. ವೈಯುಕ್ತಿಕವಾಗಿ ನಾನು ಹೇಳುವುದಾದರೆ, ಲೋಕ ಸಭೆ, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳಲ್ಲಿ ಸ್ಥಾನಗಳನ್ನು ಮೀಸಲಾಗಿರಿಸಬೇಕು ಎನ್ನುವ ಒಂದು ವಿಧ ಸರಕಾರದ ನೌಕರಿಗಳಲ್ಲಿ ಹಿಂದುಳಿದ ವರ್ಗದವರಿಗೆ ಸ್ಥಾನಗಳನ್ನು ಮೀಸಲಾಗಿರಿಸಬೇಕು ಎನ್ನುವುದಕ್ಕೆ ಆರ್ಟಿಕಲ್ 16 ರಲ್ಲಿ ಎಲ್ಲ ವಿವರವಾಗಿ ಹೇಳಲಾಗಿದೆ. ಇದಕ್ಕೆ ಯಾವ ಅಡ್ಡಿಯೂ ಬರುತ್ತಿಲ್ಲ. ಹೀಗಿರುವಾಗ ಲೋಕ ಸಭೆ ಗಳಲ್ಲಿ ಹಾಗೂ ವಿಧಾನಸಭೆಗಳಲ್ಲಿ ಸ್ಥಾನಗಳನ್ನು ಮೀಸಲಾಗಿರಿಸಬೇಕು ಎಂದು ತರುವ ಈ ತಿದ್ದುಪಡಿಗೆ ನಾನು ವಿರೋಧಿ. ಇದು ನನ್ನ ವೈಯುಕ್ತಿಕವಾದ ಅಭಿಪ್ರಾಯ. ಲೋಕ ಸಭೆಯಲ್ಲಿ ಹಾಗೂ ರಾಜ್ಯ ಸಭೆಗಳಲ್ಲಿ ಸುಮಾರು 22 ವರ್ಷಗಳಿಂದಲೂ ಹಿಂದುಳಿದ ವರ್ಗದ ಜನರಿಗೆ ಸ್ಥಾನಗಳನ್ನು ಮೀಸಲಾಗಿಟ್ಟರೂ ಅವರಿಗೆ ಅನುಕೂಲವಾಗುವ ಹಾಗೆ ಏನನ್ನೂ ಮಾಡಿಲ್ಲ ಎನ್ನುವುದು ನಮ್ಮ ಅನುಭವದಿಂದ ಕಾಣುತ್ತದೆ. ಶ್ರೀರಾಮ ಸುಭಾಗ್ ಸಿಂಗರವರ ಮಾತಿನಲ್ಲಿ ಹೇಳುವುದಾದರೆ ''Every one has started shedding tears'' ಎಂದು ಹೇಳಿದ್ದಾರೆ. ಮುಂದುವರಿದು ಇನ್ನೊಂದು ಮಾತನ್ನು ಹೇಳಿದ್ದಾರೆ. ಹರಿಜನರಿಗೆ ಅರ್ಧ ಎಕರೆ ಭೂಮಿ ಕೂಡ ಸರಕಾರ ಕೊಡುವುದಕ್ಕೆ ಆಗುವುದಿಲ್ಲ ಎಂದು ಅವರೇ ಹೇಳತಕ್ಕ ಪರಿಸ್ಥಿತಿ ಬಂದಿದೆ. ಮಾನ್ಯ ಅರ್ಥ ಮಂತ್ರಿಗಳು ಹೇಳಿದರು ಅಶೋಕ ಮೆಹತಾರವರು ಕೇಂದ್ರ ಸರಕಾರದಲ್ಲಿ ಇದನ್ನು ಜ್ಞಾಪಕಕ್ಕೆ ತರದೇ ಇದ್ದ ಪಕ್ಷದಲ್ಲಿ ಜನವರಿ 26ನೇ ತಾರೀಖಿನಿಂದ ಇನ್ನೂ 10 ವರ್ಷಗಳು ಈ ಸೌಲಭ್ಯಗಳನ್ನು ಮುಂದುವರಿಸಿಕೊಂಡು ಹೋಗುವ ಪರಿಸ್ಥಿತಿ ಇರುತ್ತಿರಲಿಲ್ಲ ಎಂದು. ನಮ್ಮ ಪಂಗಡದವರು ಇದಕ್ಕೆ ಋಣಿಗಳಾಗಿರಬೇಕೆಂದು ಅರ್ಥಬರುವ ಮಾತನ್ನು ಅವರು ಹೇಳಿದರು. ನಾನು ಪ್ರಶ್ನೆ ಮಾಡುತ್ತೇನೆ, ನಿಜವಾಗಿ ಸರಕಾರ ಇದನ್ನು ಕೊಡಬೇಕು ಎಂದು ಉದ್ದೇಶ ಇದ್ದ ಪಕ್ಷದಲ್ಲಿ ಕೇಂದ್ರಸರಕಾರ ಮರೆತಿದ್ದರೂ ಇದರ ಬಗ್ಗೆ ಕೇಂದ್ರಸರಕಾರಕ್ಕೆ ಈ ಸರಕಾರ ಏನಾದರೂ ತಿಳುವಳಿಕೆ ಕೊಟ್ಟಿದೆಯೇ ಎಂದು. ಭಾರತದಲ್ಲಿ ಇವರೂ ಒಂದು ಜನಾಂಗ. We have not chosen our birth in this community or caste. Somehow, we are born in this community and caste. ಆದರೆ ಸಮಾಜದಲ್ಲಿ ಮುಂದುವರಿದಂತಹ ಜನ ಅಸ್ಪೃಶ್ಯರು ಎಂದು ನಮ್ಮನ್ನು ಕರೆದಿದ್ದಾರೆ. ಮದ್ರಾಸಿನ ಸದಸ್ಯರು ತಮ್ಮ ಭಾಷಣದಲ್ಲಿ ''Women belonging to scheduled caste have been paraded naked in the streets which I have seen'' ಎಂದು ಹೇಳಿದ್ದಾರೆ. ಈ ಒಂದು ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿ ಇರುವಾಗ ಅದನ್ನು ಪಾರು ಮಾಡಬೇಕಾದರೆ, ಲೋಕಸಭೆಯಲ್ಲಿ, ವಿಧಾನಸಭೆಯಲ್ಲಿ ಕೆಲವರು ಸೀಟುಗಳನ್ನು ಮೀಸಲಾಗಿ ಇಡುವುದರಿಂದ ಸಾಧ್ಯವಿಲ್ಲ ಎಂದು ನನ್ನ ಅಭಿಪ್ರಾಯ. ಇದರಿಂದ ನನ್ನ ಜತೆ ಹಲವಾರು ಸ್ನೇಹಿತರು ಈ ಸಭೆಗೆ ಬರಬಹುದು ಮತ್ತು ಭಾಷಣ ಮಾಡಬಹುದು. ಆದರಿಂದ ಯಾವ ಕ್ರಾಂತಿಯೂ

ಆಗುವುದಿಲ್ಲ. ಯಾವ ಜನಾಂಗಕ್ಕೆ ನ್ಯಾಯಕ್ಕಾಗಿ ಹೊಡೆದಾಡುವ ಸ್ವಾಭಿಮಾನ ಇರುವುದಿಲ್ಲವೋ, ಅಂತಹ ಜನಾಂಗ ಮುಂದುವರಿಯುವುದಿಲ್ಲ ಎನ್ನುವ ಅಭಿಪ್ರಾಯವುಳ್ಳವನು ನಾನು. ಅದು ಆಗಬೇಕಾದರೆ ಜನತೆಯಲ್ಲಿ ಸಂಘಟನೆ ಬರಬೇಕೇ ವಿನಾ ಭಿಕ್ಷಾನ್ನದಿಂದ ಸಾಧ್ಯವಿಲ್ಲ. 20 ವರ್ಷಗಳಿಂದ ಭಿಕ್ಷಾಟನೆ ಮಾಡಿದ್ದು ಆಗಿದೆ. ಮೊನ್ನೆತಾನೇ 1969ನೇ ಜುಲೈ, 7ನೇ ತಾರೀಖು ಅಸ್ಪೃಶ್ಯತೆಯ ಕಾನ್‌ಫರೆನ್ಸ್ ನಡೆಯಿತು. ಅಲ್ಲಿ ಕೆಲವು ವಿಚಾರಗಳು ಚರ್ಚೆಯಾಗಿ ಅವರ ಚಾರ್ಟರ್ ಆಫ್ ಡಿಮ್ಯಾಂಡ್ಸನ್ನು ಎಲ್ಲಾ ರಾಜಕೀಯ ಪಕ್ಷಗಳ ಪರವಾಗಿ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದಾರೆ. ಈ ಸರಕಾರ ಇದರ ಬಗ್ಗೆ ವಿಚಾರ ಮಾಡಿದೆಯೋ ಎನ್ನುವುದನ್ನು ಸಮ್ಮೇಳನದ ಅಧ್ಯಕ್ಷರಿಗಾಗಲೀ, ಕಾರ್ಯಕಾರಿಸಮಿತಿಯ ಅಧ್ಯಕ್ಷರಿಗಾಗಲೀ ಏನೂ ಚಕಾರ ವರ್ತಮಾನ ಇಲ್ಲ. ಇಂತಹ ಪರಿಸ್ಥಿತಿ ಇರುವಾಗ ಇನ್ನೊಬ್ಬರನ್ನು ಕೇಳುವುದಕ್ಕಿಂತ ನಮ್ಮ ಉದ್ಧಾರದ ಬಗ್ಗೆ ನಾವು ಪ್ರಯತ್ನ ಮಾಡತಕ್ಕದ್ದು ಸರಿ ಎಂದು ನನ್ನ ಒಂದು ಅಭಿಪ್ರಾಯ. ಈ ಬಗ್ಗೆ ಮಾನ್ಯ ಸ್ನೇಹಿತರು ಲೋಕಸಭೆಯಲ್ಲಿ ಆದಂತಹ ಮೆಚ್ಚಿಗೆ ಮಾತನ್ನು ಹೇಳಿದ್ದಾರೆ. ಅವರ ಮಾತಿನಲ್ಲಿ ಹೇಳುವುದಾದರೆ :

> "It is with this background we consider this Bill. Here it seems to me that a scientific study of all the points involved in this measure for the last 20 years needs to be undertaken."

ಇದನ್ನು ವಿಚಾರ ಮಾಡತಕ್ಕ ಪರಿಸ್ಥಿತಿ ಇದೆ. ನಾನು ಪ್ರಶ್ನೆ ಕೇಳುತ್ತೇನೆ ಮೈಸೂರು ರಾಜ್ಯದಲ್ಲಿ ಸುಮಾರು 26 ಸಾವಿರ ಹಳ್ಳಿಗಳು ಇವೆ, ಅವುಗಳಲ್ಲಿ ಈವೊತ್ತಿನ ದಿವಸ ಊರ ಹೊರಗೆ ಕಾಲಾನುಕಾಲಕ್ಕೆ ಇದ್ದಂಥ ಹರಿಜನರ ಮನೆಗಳು, ಕೇರಿಗಳು ಎಷ್ಟು ಊರಒಳಗೆ ಬಂದಿವೆ? ಸರಕಾರ ಈ ವಿಷಯದಲ್ಲಿ ಯಾವ ಒಂದು ಪ್ರಕಟಣೆಯನ್ನು ಕೂಡ ಮಾಡುತ್ತಾ ಇಲ್ಲ. ಇಂತಹ ಪರಿಸ್ಥಿತಿ ಇರುವಾಗ ಲೋಕಸಭೆ, ವಿಧಾನ ಸಭೆಯಲ್ಲಿ ಸ್ಥಾನಗಳನ್ನು ಮೀಸಲು ಇಟ್ಟರೆ ಹರಿಜನರ ಜನಾಂಗ ಉದ್ಧಾರವಾಗುತ್ತದೆ ಎಂದು ತಿಳಿದುಕೊಳ್ಳುವುದಾದರೆ ಅದು ತಪ್ಪು ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಯಾವುದೋ ರಾಜಕೀಯ ಒತ್ತಡಕ್ಕೆ ಒಳಗಾಗಿ ಈ ಒಂದು ತಿದ್ದುಪಡಿಯು ನಮ್ಮ ಮುಂದೆ ಈವೊತ್ತಿನ ದಿವಸ ಒಂದು ಕಾನೂನು ಆಗತಕ್ಕ ಪರಿಸ್ಥಿತಿಯಲ್ಲಿ ಇದೆ. ಇನ್ನು ಹೆಚ್ಚು ಹೇಳದೆ ಸಭೆಯ ಎಲ್ಲಾ ಸದಸ್ಯರಿಗೂ ಸರಕಾರಕ್ಕೂ ಕೂಡ ನಾನು ಕಳಕಳಿಯಿಂದ ಮನವಿಮಾಡಿಕೊಳ್ಳುವುದು ಇಷ್ಟೇ. ಈ ಒಂದು ಷೋ ಮಾಡುವುದನ್ನು ಕೈಬಿಟ್ಟು ನಾಲ್ಕಾರು ಜನಗಳ ಪ್ರತಿನಿಧಿಗಳನ್ನು, ಮೆಂಬರುಗಳನ್ನಾಗಿ ಮಾಡಿ, ಮಂತ್ರಿಗಳನ್ನಾಗಿ ಮಾಡಿ, ಕೆಲಕೆಲವು ಕಮಿಟಿಗಳ ಸದಸ್ಯರುಗಳ ಚೇರ್‌ಮನ್‌ರ ಪದವಿ ಕೊಡುವುದರಿಂದ ನಾವು ಉದ್ಧಾರವಾಗುತ್ತೇವೆ ಎಂದು ಹೇಳುವ ಕಾರ್ಯಕ್ರಮವನ್ನು ಕೈಬಿಟ್ಟು ಅಂತಃಕರಣ ಪೂರ್ತಿಯಾಗಿ ಅವರನ್ನು ಮೇಲಕ್ಕೆ ಎತ್ತತಕ್ಕಂಥ ಕಾರ್ಯಕ್ರಮವನ್ನು ಹಾಕತಕ್ಕಂಥ ಕೆಲಸಮಾಡಬೇಕೇ ವಿನಹ ಈ ಒಂದು ತಿದ್ದುಪಡಿಯಿಂದ ಅವರ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ನಾನು ಯಾವತ್ತೂ ಕೂಡ ಮೀಸಲು ಸ್ಥಾನಕ್ಕೆ ವಿರೋಧವಾಗಿರುವುದರಿಂದ ಇದನ್ನು ನಾನು ವೈಯಕ್ತಿಕವಾಗಿ ವಿರೋಧಮಾಡುತ್ತೇನೆ.

ಮತ್ತೆ ಆಂಗ್ಲೋ ಇಂಡಿಯನ್ಸ್ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಮೂಲ ತಿದ್ದುಪಡಿಗೆ ಒಂದು ಸಣ್ಣ ತಿದ್ದುಪಡಿ ಬಂದಿದೆ. ಯಾತಕ್ಕೆ ಬಂದಿದೆಯೋ ನನಗೆ ಗೊತ್ತಿಲ್ಲ. ಒಂದು ದೃಷ್ಟಿಯಲ್ಲಿ ಹೇಳುವುದಾದರೆ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಈ ಒಂದು ಮೀಸಲು ಸ್ಥಾನ ಮುಂದುವರಿಸುತ್ತಾ ಇರುವುದರಿಂದ ಅವರಿಗೂ ಕೂಡ ಮಾಡಿರಬಹುದು ಎಂದು ನನ್ನ ಒಂದು ಅಭಿಪ್ರಾಯ. ಆದಾಗ್ಯೂ ಕೂಡ ರಾಜ್ಯಾಂಗಕ್ಕೆ ಮನ್ನಣೆ ಕೊಟ್ಟು ಎಲ್ಲಾ ಪ್ರಜೆಗಳನ್ನೂ ಸಮಾನರಾಗಿ ಮಾಡತಕ್ಕಂಥಹ ಟೈಮ್ ಬೌಂಡ್ ಕಾರ್ಯಕ್ರಮವನ್ನು ಹಾಕಿ ಎಲ್ಲರನ್ನೂ ಒಂದು ಅಂತಸ್ತಿಗೆ ತರಲಿಕ್ಕೆ ಪ್ರಯತ್ನಮಾಡುವುದು ಸ್ತುತ್ಯವಾದದ್ದು. ಕೆಲವೇ ಜನಗಳನ್ನು ಎತ್ತಿಕಟ್ಟಿ ರಾಜ್ಯ ಆಳುವ ಕ್ರಮವನ್ನು ಅನುಸರಿಸಬಾರದೆಂದು ಹೇಳಿ ಈ ತಿದ್ದುಪಡಿಗೆ ನನ್ನ ವಿರೋಧವನ್ನು ವ್ಯಕ್ತಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. N. PATIL (Humnabad).—Sir, while supporting this Constitutional amendment, I feel that this is not the end. Some say ten years further reservation of seats was given once as concessions. Another 10 years further concessions is being given. Now, this is the third time! But we will have to ask ourselves. Are you doing this as a charity or as a step towards centuries overdue duty to the Nation?

(SRI V. N. PATIL)

If it is considered as a duty, that is understandable. But what has happened in the past? It is done more as out of charity to make them feel that it is on account of charity your rights are reserved and thanks to the privilege, you are allowed to get elected. A section of the population of the Nation today is demanding the minimum inherent human rights and they are denied to those rights even after 22 years of freedom. What is the use of giving a half-hearted, much proclaimed generosity, without any content of generosity in it. This is farce, hypocracy. It is a trick, I would call it, rather than a noble service. If we are to recognise that every Indian citizen is equal to another citizen, we should do away with caste system. By writing the name of the child in the school when it enters the school, the poison of caste system is injected into the child. Unless this rotten curse of so-called Hindu upper caste supremacy is done away with, there is no question of our doing justice to a section of our own countrymen known as the Scheduled Castes and Scheduled Tribes. The slogan should be hell with such outmoded religion which preaches inequality between man and man. Hell with this system of Government which differentiates and discriminates between caste and caste for education and for jobs. What has been done in the past? Bapuji gave maximum of his life service to the cause of Harijan Community, but was he able to solve the problem? When we communists in Telangana were distributing land to the tiller, and we were at the peak of popularity, Vinobha Bhave tried to distribute land in the name of Bhoodan, solely to crush our influence. He tried to distribute land to Harijans. Rich peasantry and landlords were persuaded by him, in order to avoid communism to come forward and give away some rocky and unfertile soil to poor Harijans where a Harijan could not dig a grave were he unfortunate enough to lose his father. What is the use of shedding crocodile tears? It is not by extending separate electorate to them but by doing away with caste system and liberating the Harijans from the age-old satanic repression under caste Hindus, whose selfish conservatism kept Harijans economically, socially and politically backward for generations and now offering reservations for another ten years by amending the Constitution is no more or no less than shedding crocodile tears, while perpetuating the old order. They should be given the rights. People should take up that attitude. Some attempted conversion of Schedule Castes and Scheduled Tribes to Christianity. Has Christianity solved this problem by conversion? No. Reservations for a third time by constitutional amendment is not the way to solve problem when the feudal upper strata Hindu religion is so jealous that a poor Harijan wearing chappals, entering a restaurant asking a barbour to shave him is considered unforgivable sin. Hands are chaffed of if some dare to defy this inhuman philosophy of pouring melted metal in the ears of Harijan attempting to hear or read or study vedas. Take for instance, Rama Narasiah in Andhra pradesh got his hands chopped off.

In Keelavenamani, 46 Harijan women and children were roasted to death for the simple sin that they demanded human working conditions and just wages. Even the slogan of separate electorate will not help solve the problem.

There is a class content in the centuries together exploitation and torture for this class known as Scheduled Castes and Scheduled Tribes. The upper caste Hindu, conscious of their class interest and with a view to safeguard it at any cost is hell bent upon keeping the down trodden as eternally down trodden, and creating this class consciousness amongst the Scheduled Castes and Scheduled Tribes and exposing them before the worst class enemy who is interested to keep them uneducated, under-employed, unemployed, and unskilled labour, so that the fruits of advancement in industrial sector and industrialisation should go to the upper caste and class Hindus, so that the fruits of advancement and progress in agriculture sector should go to the upper caste leaving Scheduled Castes and Scheduled Tribes only as unskilled wage labour. Take industry, managerial and skilled are only upper caste, unskilled and manual labour are the scheduled castes and scheduled tribes ; take agriculture sector, landed peasantry is the upper caste, landless is the Scheduled Castes and Scheduled Tribes. The need of the time is to organise a militant working class organisation to secure land to the landless, job to the jobless, education to the illiterate. Make Harijans wake up to these rights to fight to the finish for these achievements.

Mere shedding crocodile tears is no use. Is it not the same Ramayana we are reading today which was written by a tribal ? Is it not the same Mahabharatha we are reading today which was written by a poor fisherman ? Do justice to those who have given to us our epic Ramayana and Mahabharatha, who are giving us food by dint of hard labour, who have given us the culture and history by their sacrifice and this is what is demanded of from the society who have crushed the have-nots. Any false bogey of communism to slander communism will not help to suppress the tide of uprising.

5-00 P.M.

The Nation has made some progress in two sectors—one is the agricultural sector and another the industrial sector. In the Governor's Address reference is made to 50,000 patta books said to have been printed. What is the use of it ? The truth is, the Hindus will never tolerate the presence of scheduled caste and scheduled tribes. We must start a movement for the liberation of the scheduled castes and scheduled tribes. Mere AHIMSA is not going to pay. We need a militant organisation working for the liberation of scheduled castes and scheduled tribes who could fight for their rights. Unless they begin to fight, for their wages, for their land, for their jobs in an organised and militant way, there is no salvation. Merely keeping them in separate colonies by giving constitutional concessions is no solution to bring him equal with the rest of all in society, there can be no

(SRI V. N. PATIL)

amelioration for the down-trodden people. In all Indian History, you find the caste system predominating. You take up any sector, industrial sector or agricultural sector, the unskilled labourer is generally the scheduled caste and the scheduled tribes. For centuries to come, they will continue in that manner. For another 50 years, if you go on extending the constitutional concessions, it will not solve the problem. Unless you take steps to fill up all the future vacancies by candidates belonging to these classes, we would not have done justice to them. Unless you abolish the caste system, you cannot undo this evil. Unless we organise an industrial and agrarian sectors for a class struggle, there will be no solution. This plight of the Harijans is due to the failure and criminal negligence of the Government and is a positive result of the wrong policies of the Government. The State has got a bigger role to play to bring equality and to remove disparity, give protection to the just demands and struggles and crush anti-social feudal caste Hindu repression who never hesitate to parade poor Harijan sisters in naked condition to crush their just movements as it is often happening in U. P., Andhra Pradesh; our own State is not lacking in such atrocities, for instance, I am ashamed to quote from my own district, a place by name Bothagi where huts erected by Harijans were demolished; in Changlier village for the simple reason of asking tea in a Hotel. Harijans were manhandled and boycotted by the entire caste Hindus and they were inhumanly beaten by the police and subject to hardships by implicating them in false criminal cases at the instigation of the caste Hindus and your own party Congress leaders.

When such atrocities are there day in and day out what is the use of giving such half-hearted reliefs in the name of constitutional safeguards by reservations.

So it becomes necessray to organise this man who was forgotten for generations and we call him Adi Kannadiga by that means POORVAJA KANNADIGA, to fight not only for democratic rights but organise him, allow him to be organised militantly to fight for social justice. As fight for democracy is not sufficient and fight for social justice has to be made and won. The challenge of the time is: organise him for his land, for his better wages, fight for his right to recruitment in factories as equal. This not only will create a sense of involvement, but builds in him a brilliant image of a growing India with its true culture devoid of force.

Lastly, the constitutional guarantee is there to bring about democratic equality. Where is the social justice? Mere reservations will not bring about social equality. The problem of down-trodden classes will not be solved by these reservations.

Without believing for a moment that this step can help the down-trodden in any way, I am yet inclined to support, as this little advantage too should not be taken away from them, though not of much use.

I thank the Chair for having permitted me to speak.

Smt. SHEILA IRANI (Nominated).—Hon. Speaker, I just like to say a few words with regard to the resolution that is being discussed in the House.

Special provisions were incorporated in the Constitution on behalf of the Anglo-Indian Community. These provisions were accepted by the Advisory Committee on Minority Rights after the most careful consideration of the case of the community. It was only after being convinced of the special need and the special difficulties of this Communiiy and several others that many giant personalities in the advisory committee, especially Sardar Patel and Pandit Nehru in the Constituent Assembly, accepted the imperatives of these special provisions. The special need of the community representation was strongly supported by Gandhiji, who gave an assurance which he kept that he would recommend 3 seats for the Anglo-Indians in the Constituent Assembly. Among other things, Gandhiji wrote : " If the Constituent Assembly were to ignore you then it would be a dangerous thing." This must not happen. I can mention here only briefly certain aspects of the community's problems.

The Anglo-Indian is perhaps the only racial and linguistic minority of the country. Because of that, it was the only minority to be specially defined in the Constitution. Article 336(2) provides this definition. One of the special needs of the Anglo-Indians is with regard to its schools. There is an Inter-State Board for Anglo-Indian education which co-ordinates the standards and curriculum in almost 300 schools. These schools should be recognised as part of the larger Indian educational pattern. Indeed, many leading educationalists have claimed that Anglo-Indian schools are in the vanguard of institutions at the school stage. In fact today these schools are the only all-India Schools having an all India uniform pattern of education. With the Central Schools—about 118 in number changing over increasingly to Hindi, more and more especially, all non-Hindi parents are beginning to turn to Anglo-Indian schools. In fact, there are tens of thousands of children whose parents are liable to be transferred from one part of the country to another, these schools represent the only guarantee for the continuity of their education.

The representation given to the Anglo-Indians in the legislatures has helped crucially to impart an understanding of this system, especially the State Governments and Union Government. Without this representation at the Centre and in the States, there might well be a tendency to misunderstand these Schools, to be unaware of the invaluable contribution they are making to the larger pattern of Indian education.

For instance, we are among the few schools that really implement the three language formula. We have been responsible for evolving, in liaison with the Linguistics Department of the Poona University,

(SMT. SHEILA IRANI)

special Hindi text books especially for those whose mother-tongue is not Hindi. These text-books have been acclaimed as being among the best in the country for Hindi teaching. We are also evolving more and more advanced teachniques for the teaching of the regional languages.

Most of the State Governments and the Union Government continue to assist the Inter-State Boards for Anglo-Indian Education. This is because at the Centre and our MLAs in the different States have been able to persuade the State Governments to do this. Without this assistance the Board would close down. On the Board the State Governments are represented. They are able to get to know, first hand, the invaluable work being done by the Board; how we have introduced uniform standards throughout the Country, how we have adapted our syllabus to the needs of the children in the new India, how we have implemented the three language formula and how we have continued to upgrade the standards of teaching in the second and third languages.

May I say that in spite of its microscopic size as a community, we have still continued the saga of service to Independent India.

During the critical Kashmir campaign, more than half the awards for gallantry to fighter pilots were made to Anglo-Indians. The first pilot to volunteer for service in Kashmir was an Anglo-Indian: the first pilot to land at Srinagar was an Anglo-Indian; the first pilot to land at Poonch was an Anglo-Indian. By their persistent gallantry and, often, reckless heroism they helped to repel the invaders literally from the gates of Srinagar.

At a special investiture ceremony, 63 heroes of the Army and the Air Force were given, by the President awards for gallantry that had been made in the field, during the Indo-Pakishan conflict. Of these 63 heroes, 7 were Anglo-Indians.

The Community has by its services since Independence at least deserved this special recognition of its needs and difficulties that the framers of the Constitution, after studying the whole position, were pleased to give. The framers felt, after the most careful consideration, that the only communities that had special needs and difficulties which required special parallel recognition were the Scheduled Castes and the Anglo-Indian.

I thank the Chair.

SRI D. B. KALMANKAR (Aland).—Sir, while supporting the Twenty-third Constitution Amendment Bill which has come before this House, I want to make certain observations. No doubt, reservations should be made to the Scheduled Castes and the Scheduled Tribes for a further period of ten years. But before that is done, let us consider as

to what has been done for the last 20 years for the uplift of the Scheduled Castes and Scheduled Tribes as far as social and economic problems are concerned. Secondly let us also examine whether we have been making an earnest effort to bring in an emotional integration in our society. As was rightly pointed out by my friend Sri K. H. Ranganath who spoke just now, even today we find that in almost all the villages the Harijans are having their hutments outside the villages. If you go to any hotel in the rural area, you will still find that cups and saucers are kept separately for them and if any Harijan enters a hotel he will be punished : the majority community will kick him out of the hotel. That being the case, I want to ask whether any purpose is going to be served by reservation of seats to them in the Assemblies and Parliament. Under Art. 16 of the Constitution measures can be taken by the Government for reservation of appointments in services for any backward class. So the Scheduled Castes and Scheduled Tribes can find protection under that Article. Then where is the need for reservation. I think this reservation has no meaning unless very earnest efforts are made to remove these barriers in the society. The other day at the Conference of the Visva Hindu Parishat held at Udipi, I am told that a resolution was passed that the people belonging to the Scheduled Castes and Scheduled Tribes must be treated as Hindus and all these social barriers must be removed. But I fail to understand why they have not been able to go further and say that all these Swamijis, Gurus and Mathadhipathis must go to the villages and make the Caste Hindus and Scheduled Castes and Scheduled Tribes sit together and have common dinner. I think that would have helped in solving the problem and the feeling of segregation that is being felt by our brethren in the society would have been assuaged. Unless some such efforts are made to bring in integration, no useful purpose will be served by extending the time for their representation in Assemblies and the Parliament. And it is in that aspect the whole problem has to be looked at. Unless we make earnest efforts in that direction, we cannot solve this problem. I think this amendment is made only for political consumption because the Harijans also form a very big section of the society whose votes are required by political parties. We must make a right approach in solving the problems. Let us give all the opportunities and benefits to them and see that they are brought on par with the other sections of the people.

As far as Anglo-Indians are concerned, I fail to understand why they are clubbed with the unfortunate Scheduled Castes and Scheduled Tribes. I think they must not claim such reservations. They are up to the mark. The tendency to have reservations for them must be done away with. I disagree as far as reservations for Anglo-Indians are concerned. With these observations I conclude.

† SRI C. K. RAJAIAH SHETTY (Chicknaikanahalli).—Mr. Speaker Sir, I welcome this Amendment at the outset because we have failed in our duty for the last 20 years as far as the Scheduled Castes and

(Sri C. K. Rajaiah Shetty)

Scheduled Tribes are concerned. Looking at the pathetic condition of the Harijan class, the framers of the Constitution gave concessions to them for a period of ten years and they extended the period for further ten years. Even after 20 years, what is it that the State and Central Governments have done to ameliorate their pitiable lot? If we look into the reports that have been published by the special committees constituted for this purpose by the Government and see what results have been achieved, the picture is very pathetic. Our State of Mysore like other States has failed to fulfil the objectives of the Constitution in this particlar respect of removing their disabilities.

I feel sorry for this. We are not doing what we have to do to them and we are doing what we should not do. What tangible benefits can you confer on them by providing bamboos and such other things? Do Government think that by those things they can help the advancement of those classes educationally and economically to any extent? The Harijans' problems are employment and education. Unless these two problems are solved, their advancement cannot be achieved. If you provide a Harijan with a job, he will get sufficient income; he will educate his children and provide them with better dress and he will live in a better house. These are the only two things, namely educational facilities and jobs, which could solve the problem of Harijans and not any and every kind of smaller priorities that our Government thinks of.

It is a well-known fact that this Government is keen on catching the votes of the Harijans with a view to creating differences in the country. They want to negotiate with the Harijans, secure their votes to their side and continue in power. Only with that end in view, all these small programmes and schemes for the Harijans have been introduced. Even after centuries and several amendments to the Constitution, Harijans have not been uplifted. They are where they were and untouchability is still being practised. The first thing that Government must do at least now is to enforce compulsory education on this Harijan children. They should be given accommodation in residential localities. Their children should be brought and bred up like other children. Immediately after their educational course, they should be provided with good jobs; if they get sufficient income, their living conditions will improve. Then no other schemes are necessary for Harijan uplift. This is the only solution to improve their conditions and remove the disparities between them and the other communities. In future, our Government should make up its mind that this is the only method to ensure social and economic justice to them. No useful purpose well be served by these social welfare funds; those funds are being wasted and the advancement of this community is not achieved. Before the Evaluation Committee constituted by the Centre comes, our Government should determine that it will take real and genuine steps for Harijan uplift. Thank you,

†ಶ್ರೀ ಬೋಳ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಇವತ್ತು ಈ ಸಭೆಯಲ್ಲಿ ಮಂಡಿಸಿರತಕ್ಕಂಥ ತಿದ್ದುಪಡಿಯನ್ನು ನಾನು ಸ್ವಾಗತಮಾಡುತ್ತೇನೆ. ಈಗ ತಂದಿರುವ ತಿದ್ದುಪಡಿಪ್ರಕಾರ ಹರಿಜನ, ಗಿರಿಜನರಿಗೆ ಇನ್ನು ಮುಂದಿನ 10 ವರ್ಷಗಳಲ್ಲಿ ಸ್ಥಾನ ಕಾದಿರಿಸಿದ ಕೂಡಲೇ ಅವರ ಸಮಸ್ಯೆ ಪರಿಹಾರವಾಗುತ್ತದೆಂದು ಯಾರಾದರೂ ಭಾವಿಸಿದರೆ ಅದು ಬಹಳ ತಪ್ಪು. ಕಳೆದ 20 ವರ್ಷಗಳಿಂದಲೂ ಇಂತಹ ಅವಕಾಶ ಕೊಟ್ಟರೂ ಹರಿಜನರ ಹಾಗೂ ಗಿರಿಜನರ ಸಮಸ್ಯೆ ಪರಿಹಾರವಾಗಲಿಲ್ಲ. ಇದನ್ನು ಕೇವಲ ಒಂದು ರಾಜಕೀಯ ದೃಷ್ಟಿಯಿಂದ ನೋಡದೆ ಅವರ ಸಮಸ್ಯೆಯನ್ನು ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ನೋಡಬೇಕು. ಇವತ್ತು ಹರಿಜನರಿಗೆ ನಿಜವಾಗಿ ಇತರ ಪ್ರಜೆಗಳ ಹಾಗೆ ನಮಗೂ ಸರಿಸಮಾನವಾದ ಹಕ್ಕು ಉಂಟು, ನಾವು ಆ ಹಕ್ಕಿಗೋಸ್ಕರ ಹೋರಾಟ ಮಾಡಬೇಕು, ನಮ್ಮ ಕಾಲಿನಮೇಲೆ ನಾವು ನಿಲ್ಲುವಂತೆ ಆಗಬೇಕು ಎನ್ನುವ ಭಾವನೆ ಬಂದಿದ್ದರೂ, ಆ ರೀತಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಏನೂ ಪ್ರಯತ್ನಮಾಡುತ್ತಿಲ್ಲ. ಎಷ್ಟರವರೆಗೆ ಅವರು ಈ ರೀತಿ ಶಂಕೆಯಲ್ಲಿರುತ್ತಾರೋ ಅಷ್ಟರವರೆಗೆ ಇಂತಹ ಸಮಾಜದ ಸಮಸ್ಯೆಗಳು ಪರಿಹಾರವಾಗಲಾರದು. ಅವರ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ಕೊಡಬೇಕು. ರವರು ತಮ್ಮ ಹಕ್ಕುಬಾಧ್ಯತೆಗಳನ್ನು ಒಂದೊಂದಾಗಿ ತಿಳಿದುಕೊಂಡರೆ ಮಾತ್ರ ಆಗ ಅವರು ತಮ್ಮ ಕಾಲಿನ ಮೇಲೆ ತಾವು ನಿಲ್ಲುವುದಕ್ಕೆ ಅನುಕೂಲವಾಗುತ್ತದೆಂಬ ಭಾವನೆ ಬರುತ್ತದೆ.

ಬಹು ಮುಖ್ಯವಾಗಿ ಅವರ ವಿದ್ಯಾ ಸಮಸ್ಯೆ ಕಡೆಗೆ ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರದ ದೃಷ್ಟಿ ಹೋಗಲಿ. ಇವತ್ತು ಅನೇಕ ಹಳ್ಳಿಗಳಲ್ಲಿ ಹರಿಜನ ಗಿರಿಜನರಿಗೆ ಕಡ್ಡಾಯ ಶಿಕ್ಷಣ ಜಾರಿಯಲ್ಲಿದ್ದರೂ ಅವರು ಶಾಲೆಗಳಿಗೆ ಹೋಗುತ್ತಾ ಇಲ್ಲ. ಎಲ್ಲಿ ಅವರಿಗೆ ಸಾಕಷ್ಟು ವಿದ್ಯಾಭ್ಯಾಸ ಸಿಗುದಿಲ್ಲವೋ, ಅಂತಹ ಕಡೆಗಳಲ್ಲಿ ಅವರನ್ನು ಕರೆದುಕೊಂಡುಹೋಗಿ ಒತ್ತಾಯವಾಗಿಯಾದರೂ ಶಾಲೆಗಳಿಗೆ ಕಳುಹಿಸಿ ಸಮಾಜದಲ್ಲಿ ಸರಿಸಮಾನವಾದ ಸ್ಥಾನಮಾನ ಅವರು ಪಡೆಯುವಹಾಗೆ ಮಾಡುವುದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಕರ್ತವ್ಯವಾಗಿದೆ. ಹಾಗೂ ಅದು ಸಮಾಜ ಕರ್ತವ್ಯವೂ ಆಗಿದೆ. ಇದಕ್ಕಾಗಿ ಹರಿಜನ ಮುಖಂಡರು ಯಾರೂ ಇದ್ದಾರೆಯೋ ಅವರೂ ಸಹ ಹೆಚ್ಚು ಪ್ರಯತ್ನಮಾಡಬೇಕು. ಇವತ್ತು ಕೆಲವು ಹರಿಜನ ಮುಖಂಡರು ತಮ್ಮ ಸ್ಥಾನಮಾನಗಳಿಗಾಗಿ ಹೋರಾಟಮಾಡುತ್ತಿದ್ದಾರೆ. ಮಹಾತ್ಮ ಗಾಂಧಿಯವರು ಹೇಳಿದಂತೆ ಒಂದು ಕರ್ತವ್ಯ ಪಾಲನೆಯಲ್ಲಿ ನಿರತರಾಗುವುದಿಲ್ಲ. ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಅವರ ಸ್ಥಾನ ಭದ್ರತೆ ಬಗ್ಗೆ ಅವರ ದೃಷ್ಟಿ ಹೋಗಿದೆ. ಆ ಜನಾಂಗದವರ ಸೇವೆ ಮಾಡಿ ಅವರ ಮುಂದಾಳುಗಳಾಗಬೇಕೆಂದು ಹೇಳುವವರು ಈ ರೀತಿಯಾಗಿ ಮಾಡುವುದು ನಿಜವಾಗಿ ಬಹಳ ದುಃಖಕರವಾದ ವಿಷಯ. ಈಗಿನ ಪರಿಸ್ಥಿತಿಯಲ್ಲಿ ಅವರ ಸಮಸ್ಯೆ ಪರಿಹಾರವಾಗಬೇಕಾದರೆ, ಕೇವಲ ಮುಂದಿನ 10 ವರ್ಷಗಳಲ್ಲಿ ಅಸೆಂಬ್ಲಿಯಲ್ಲಾಗಲೀ, ಅಥವಾ ಪಾರ್ಲಿಮೆಂಟಿನಲ್ಲಾಗಲೀ ಅವರಿಗೆ ಸ್ಥಾನಭದ್ರತೆ ಮಾಡದೆ; ಅವರ ಆರ್ಥಿಕ ಸಮಸ್ಯೆಯ ವಿಷಯದ ಬಗ್ಗೆ ಆಲೋಚನೆಮಾಡಿ ಅವರು ಯಾವ್ಯಾವ ಕಸಬಿನಲ್ಲಿದ್ದಾರೆ, ಅವರಿಗೆ ಯಾವ್ಯಾವ ಸೌಲಭ್ಯಗಳು ಸಿಗಬೇಕು, ಯಾವ್ಯಾವ ಕಾರ್ಯಕ್ರಮಗಳನ್ನು ಸರ್ಕಾರ ವಹಿಸಿಕೊಳ್ಳಬೇಕು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಅವರಿಗೆ ತಕ್ಕ ಪರಿಹಾರಗಳನ್ನು ಕೊಡಿಸುವುದು ನಿಜವಾಗಿ ಸರ್ಕಾರದ ಕೆಲಸವಾಗಿದೆ. ಈ ದೃಷ್ಟಿಯಿಂದ ಸರ್ಕಾರ ಕೆಲಸಮಾಡಬೇಕು. ಆ ರೀತಿಯಾಗಿ ಈ ಸಮಾಜವನ್ನು ಉದ್ಧಾರಮಾಡಬೇಕು. ಕೇವಲ ಹಿಂದೂ ಧರ್ಮದಮೇಲೆ ತಪ್ಪು ಹೊರಿಸಬಾರದು. ಆದರೆ ಈ ಸಮಾಜ ಜೀವನದಲ್ಲಿ ಹಾಗೂ ಹಿಂದೂ ಧರ್ಮದಲ್ಲಿ ಏನೂ ಅಸ್ಪೃಶ್ಯತೆ ಇಲ್ಲ. ಕೇವಲ ಧರ್ಮದ ತತ್ವವನ್ನು ತಿಳಿಯದೆ ಹೆಚ್ಚು ವಾದಮಾಡುವುದು ಸರಿಯಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ (ಹರಿಹರ).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಪುಟ್ಟಸ್ವಾಮಿಯವರು ಮಂಡಿಸಿರತಕ್ಕಂಥ ಈ ನಿರ್ಣಯನ್ನು ನಾನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಮೀಸಲು ಸ್ಥಾನಗಳನ್ನು ಇರತಕ್ಕಂಥ ವಿಷಯದಮೇಲಿನ ಚರ್ಚೆ ರಾಜ್ಯ ಸಭೆಯಮುಂದೆ ಬಂದಾಗ ನಾನು ಅಲ್ಲಿ ಇರುವಂಥ ಅವಕಾಶವಿತ್ತು. ಆಗ ದಿವಂಗತ ಡಾ॥ ಅಂಬೇಡ್ಕರ್ ಅವರು ಯಾವ ರೀತಿ ಈ ನಿರ್ಣಯವನ್ನು ಮಂಡಿಸಿದರು. ಆಗ ಅನೇಕ ಕಾರಣಗಳನ್ನು ಕೊಟ್ಟು 10 ವರ್ಷಗಳ ಕಾಲ ಮೀಸಲು ಸ್ಥಾನವಿದ್ದರೆ ಸಾಕು, ಅಷ್ಟರಲ್ಲಿ ಹರಿಜನ, ಗಿರಿಜನರು ಬಾಕಿ ಸಮಾಜದವರ ಜೊತೆಗೆ ಬರಬಹುದು ಎಂಬ ನಿರೀಕ್ಷಣೆಯಿಂದ ಆಗ 10 ವರ್ಷಗಳು ಸಾಕು ಎಂದು ಮಾಡಿದರು. ಮತ್ತೆ 10 ವರ್ಷಗಳ ಕಾಲ ಮುಂದೂಡಬೇಕಾಗಿ ಬಂತು. ಈಗ ಪುನಃ ಮತ್ತೆ 10 ವರ್ಷಗಳ ಕಾಲ ಮುಂದೂಡುವ ಪರಿಸ್ಥಿತಿ ಸಹಜವಾಗಿ ಬಂದಿದೆ. ನನ್ನ ಅಭಿಪ್ರಾಯದಲ್ಲಿ ಈ ಸಮಾಜದ ಏರುಪೇರುಗಳು ಹೋಗಬೇಕಾದರೆ ಮುಖ್ಯವಾಗಿ ಆರ್ಥಿಕ ಮತ್ತು

(ಶ್ರೀ ಎಚ್. ಸಿದ್ಧವೀರಪ್ಪ)

ವಿದ್ಯಾಭ್ಯಾಸ ಪ್ರಗತಿಯಲ್ಲಿ ಅವರು ಹೆಚ್ಚು ಮುಂದುವರಿಯಬೇಕು. ಅವರ ಆರ್ಥಿಕ ಮತ್ತು ವಿದ್ಯಾಭಿವೃದ್ಧಿ ಆಗದ ಹೊರತು ಇನ್ನು ಅವರಿಗೆ 100 ವರ್ಷಗಳು ರಿಜರ್ವೇಷನ್ ಇಟ್ಟರೂ ಪ್ರಯೋಜನವಾಗುವುದಿಲ್ಲ. ಸರ್ಕಾರದವರು ಹೀಗೆ ರಿಜರ್ವ್ ಮಾಡುವುದು ಕೇಂದ್ರದ ಪ್ರಶ್ನೆಯೆಂದು ತಿಳಿದರೆ ಬಹಳ ತಪ್ಪು ಮಾಡಿದಂತಾಗುತ್ತದೆ. ಪಿ.ಎಸ್.ಸಿ. ಅವರ ಮುಂದೆ ಇವರ ಸಮಸ್ಯೆ ಬಂದಾಗ, ಅನೇಕ ಸಾರಿ ಕೆಲವು ಷರತ್ತುಗಳನ್ನು ರೂಲ್ಸ್‌ನಲ್ಲಿ ಹಾಕಿರುತ್ತಾರೆ. ಸಾಮಾನ್ಯವಾಗಿ ಸೋಷಿಯಲ್ ಕಂಡೀಷನ್ಸ್ ಮತ್ತು ಎನ್‌ವೈರನ್‌ಮೆಂಟ್ ಯಾರಿಗೆ ಸರಿಯಾಗಿರುತ್ತದೋ ಅಂತಹವರ ಮಕ್ಕಳು ಹೆಚ್ಚು ಬುದ್ಧಿವಂತರಾಗುತ್ತಾರೆ. ಅದಿಲ್ಲದೇ ಇರತಕ್ಕಂಥವರು ಅಷ್ಟು ಬುದ್ಧಿವಂತರಾಗುವುದಿಲ್ಲ. ಆದ್ದರಿಂದ ಹಳ್ಳಿಗಳಿಂದ ಬಂದಿರತಕ್ಕವರು ಒಳ್ಳೆಯ ರೀತಿಯಿಂದ ವಿದ್ಯಾಭ್ಯಾಸದಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ನಾವು ಅವರ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನಕೊಡಬೇಕು. ಎಜುಕೇಷನಲ್ ಸ್ಟ್ಯಾಂಡರ್ಡ್ ಅವರಿಗೆ ಮಾತ್ರ ಕಡಿಮೆ ಮಾಡುವುದಕ್ಕೆ ಸಾಧ್ಯವೇ ಎಂದು ಕೆಲವರು ಕೇಳಬಹುದು. ನಾನು ಹೇಳುತ್ತೇನೆ, ಅದು ಆಶ್ಚರ್ಯಕರವಾಗಿ ಕಾಣಬಹುದು, ಬಾಕಿಯವರಿಗೆ ಶೇಕಡ 45ರಷ್ಟು ಇಟ್ಟು ಇವರಿಗೆ ಸೇಕಡ 25ರಷ್ಟು ಇಟ್ಟರೆ ಏನೂ ತಪ್ಪಾಗುವುದಿಲ್ಲ. ಇದರಿಂದ ಸ್ಟ್ಯಾಂಡರ್ಡ್ ಹೋಯಿತೆಂದು ಯಾರೂ ಗಾಬರಿಪಡ ಬೇಕಾಗಿಲ್ಲ. ಏಕೆಂದರೆ ಅವರಿಗೆ ಅಂತಹ ಒಳ್ಳೆಯ ಸನ್ನಿವೇಶವಿರುವುದಿಲ್ಲ. ಅದಕ್ಕಾಗಿ ಅವರು ಹೆಚ್ಚಿಗೆ ಮುಂದುವರಿಯಲು ಕಷ್ಟವಾಗಿದೆ. ಹಿಂದೆ ಶ್ರೀಮಾನ್ ಸಿದ್ದಯ್ಯನವರು ಇದರ ಬಗ್ಗೆ ಪಾರ್ಲಿಮೆಂಟಿನಲ್ಲಿ ಬಹಳ ಚೆನ್ನಾಗಿ ವಾದಿಸಿದ್ದಾರೆ. ಈ 20 ವರ್ಷಗಳ ಕಾಲದಲ್ಲಿ ಒಂದನೆ, ಎರಡನೆ, ಮೂರನೆ ಮತ್ತು ನಾಲ್ಕನೆ ವರ್ಗಗಳ ಪೈಕಿ, ನಾಲ್ಕನೇ ವರ್ಗದವರಲ್ಲ ಪರ್ಸೆಂಟೇಜ್ ಎಷ್ಟು ಬರಬೇಕೋ ಅಷ್ಟು ಬಂದಿದೆ. ಮೂರನೇ ವರ್ಗ ಸೇಕಡ ಐದರಷ್ಟು ಜಾಸ್ತಿ ಇರಬಹುದು. ಕ್ಲಾಸ್ 1 ಮತ್ತು ಕ್ಲಾಸ್ 2·5 ಮತ್ತು 1 ಪರ್ಸೆಂಟ್ ಇರುವುದು ನೋಡಿದರೆ ಯಾರಿಗಾದರೂ ನಾಚಿಕೆಗೇಡು. ಅವರಲ್ಲ ಕೆಲವರು ಇರತಕ್ಕವರು ಮೇಧಾವಿಗಳು.

Sri K. PUTTASWAMY.—What is the fate of backward classes even though efforts have been made from 1939 ?

Sri H. SIDDAVEERAPPA.—We are better than Scheduled castes.

Sri K. PUTTASWAMY.—Did we reach the target ?

Sri H. SIDDAVEERAPPA.—We have not yet. But special weightage will have to be given to them.

I am making a suggestion to the Government that until and unless they take positive steps by amending rules and see that certain weightage is given in the employment opportunities, they cannot come up. ಏನೋ ಒಬ್ಬರಿಬ್ಬರು ಶ್ರೀಮಾನ್ ರಾಚಯ್ಯನವರು, ಶ್ರೀಮಾನ್ ರಾಮಕೃಷ್ಣ ಅವರು ಮಂತ್ರಿಗಳಾಗಿದ್ದಾರೆ, ಅವರಿಂದ ಈ ಸಮಾಜ ಮುಂದಕ್ಕೆ ಬಂತು ಎಂಬುದಾಗಿ ತಿಳಿದುಕೊಳ್ಳುವುದು ಶುದ್ಧ ದಡ್ಡತನ. ಈಗ್ಗೆ 18 ವರ್ಷಗಳ ಕಾಲ ಮಿರ್ಜಾ ಸಾಹೇಬರು ದಿವಾನ್‌ರಾಗಿದ್ದರು. ಆಗಲೂ ಬುಡನ್ ಸಾಬಿ ಜಟಕಾ ಹೊಡೆಯುವುದು ತಪ್ಪಲಿಲ್ಲ. ಈಗ ಮಾನ್ಯ ಶ್ರೀ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿರಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ವಿಶ್ವೇಶ್ವರಯ್ಯನವರು ದಿವಾನ್‌ರಾಗಿದ್ದಾಗಲೂ ಹೋಟಲುಗಳಲ್ಲಿ ಅಡಿಗೆ ಮಾಡುವವರು ಇರಲಿಲ್ಲವೇ ?

5-30 P.M.

ಶ್ರೀ ಎಚ್. ಸಿದ್ಧವೀರಪ್ಪ.—ಈ ಜನಾಂಗದವರನ್ನು ಮುಂದಕ್ಕೆ ತರಬೇಕಾದರೆ ಅವರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೆ ತರುವುದು ಬಹಳ ಮುಖ್ಯವಾದುದು. ಇವತ್ತಿನದಿವಸ ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ, ಏನೆಂದರೆ ಇದುವರೆಗೆ ಹರಿಜನರಿಗೆ ಎಷ್ಟು ಜಮೀನು ಕೊಡಲಾಗಿದೆ

ಮತ್ತು ಎಷ್ಟು ಜನ ಮಾಡಿಕೊಳ್ಳದೆ ಅವರೇ ಇಟ್ಟುಕೊಂಡಿದ್ದಾರೆ ಎಂಬದನ್ನು ಸರ್ವೆ ಮಾಡಿಸಬೇಕು. ಹರಿಜನರಿಗೆ ಜಮೀನು ಸಿಗುತ್ತದೆ ಎಂದು ತಿಳಿದರೆ ಸಾಕು, ಕೆಲವರು ಸ್ಟ್ಯಾಂಪ್ ಖರ್ಚನ್ನು ಸಹ ಅವರಿಗೆ ಕೊಟ್ಟು, ಅವರ ಹೆಸರಿಗೆ ಜಮೀನು ಬಂದಮೇಲೆ ತಮ್ಮ ಹೆಸರಿಗೆ ಮಾಡಿಸಿಕೊಳ್ಳುವವರು ಇದ್ದಾರೆ. ಇವರ ಹೆಸರಿನಿಂದ ದುರುಪಯೋಗವಾಗುತ್ತಿರುವಷ್ಟು ಬೇರೆ ಯಾರ ಹೆಸರಿನಿಂದಲೂ ಸಹ ಆಗುತ್ತಿಲ್ಲ. ಇದು ವಿಷಾದಕರವಾದ ವಿಷಯ. ಇಲ್ಲಿರುವ ಹರಿಜನ ಮಂತ್ರಿಗಳು ಹೇಳಬಹುದು, ನಾವು ನೋಡಿಕೊಳ್ಳುತ್ತೇವೆ ಎಂದು. ಆದರೆ ಅದು ಅಷ್ಟು ಸುಲಭವಾಗಿ ನಡೆಯುವುದಿಲ್ಲ. ನಿಮ್ಮ ಬೊಜ್ಜು ಬೆಳೆದರೆ ಸಾಲದು. ಹರಿಜನರಿಗೆ ನೀವು ಏನು ಸೇವೆ ಮಾಡಿದ್ದೀರಿ ಎಂಬುದನ್ನು ಮೊದಲು ನೀವು ನಿಮ್ಮ ಹೃದಯವನ್ನು ಮುಟ್ಟಿ ನೋಡಿಕೊಳ್ಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಅವರಿಗೆ ಹೃದಯ ಇಲ್ಲದಿದ್ದರೆ ?

ಶ್ರೀ ಎಚ್. ಸಿದ್ಧವೀರಪ್ಪ.—ಅವರಿಗೆ ಹೃದಯ ಇಲ್ಲದಿದ್ದರೆ ಪ್ಲಾಸ್ಟಿಕ್ ಹೃದಯವನ್ನು ಬೇಕಾದರೆ ಜೋಡಿಸೋಣ. ಹರಿಜನರ ಪ್ರತಿನಿಧಿಗಳಾಗಿ ನೀವು ಇಲ್ಲಿ ಇರುವುದರಿಂದ ಅವರ ರಕ್ಷಣೆ ಮಾಡುವುದು ನಿಮ್ಮ ಕರ್ತವ್ಯ. ಈ ಒಂದು ನಿರ್ಣಯವನ್ನು ಯಾರೂ ವಿರೋಧ ಮಾಡುವ ಸ್ಥಿತಿಯಲ್ಲಿ ಇಲ್ಲ. 10 ವರ್ಷ ಕಾಲ ಎಂದು ಇರುವುದನ್ನು ಇನ್ನೂ ಅನೇಕ ಸಲ ಪುನರುಕ್ತಿ ಮಾಡ ಬೇಕಾಗಬಹುದು. ಇವರ ಆರ್ಥಿಕ ಸ್ಥಿತಿ ಇನ್ನೂ ಸುಧಾರಿಸಬೇಕಾಗಿದೆ. ಮನೆಗಳನ್ನು ಕಟ್ಟಿ ಕೊಳ್ಳಲು ಇವರಿಗೆ ಹಣವನ್ನು ಸಾಲವಾಗಿ ಕೊಡುತ್ತಿದ್ದೇವೆ ಎಂದು ಸರ್ಕಾರದವರು ಹೇಳಬಹುದು. ಆದರೆ ಆ ಹಣ ಪೂರ್ತಿಯಾಗಿ ಅವರ ಕೈಸೇರುತ್ತಿದೆಯೋ ಎಂಬುದನ್ನು ಸರ್ಕಾರದವರು ವಿಚಾರ ಮಾಡಬೇಕು. ಇವತ್ತಿನದಿವಸ ಆಡಳಿತದ ಲೋಪದೋಷಗಳಿಂದ ಇವರಿಗೆ ಏನೇನು ಪ್ರಯೋಜನಗಳು ಸಿಗಬೇಕಾಗಿತ್ತೋ ಅದು ಸಿಗುತ್ತಿಲ್ಲ. ಇದಕ್ಕೆ ಸರ್ಕಾರದಲ್ಲಿರುವ ಅಲಕ್ಷ್ಯ ಮತ್ತು ಅದಕ್ಷತೆಯೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಕೌಜಲಗಿಯವರು ಹರಿಜನರಿಗೆ ಜಮೀನನ್ನು ಕೊಡುತ್ತಿದ್ದೇವೆ ಎಂದು ಹೇಳಬಹುದು, ಆದರೆ ಆ ರೀತಿ ಜಮೀನು ಪಡೆದುಕೊಂಡವರಲ್ಲಿ ಎಷ್ಟು ಜನ ಇಟ್ಟುಕೊಂಡಿದ್ದಾರೆ ಎಂಬುದನ್ನು ಸರ್ವೆ ಮಾಡಿಸಬೇಕು. ಕಾನೂನು ಮೂಲಕವಾದರೂ ಕೂಡ ಮೊದಲು ಈ ಸರ್ವೆ ಕೆಲಸವನ್ನು ಮಾಡಿಸಬೇಕು. ಇಷ್ಟನ್ನು ಹೇಳಿ ನಾನು ಈ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ.

ಶ್ರೀ ಎಂ. ನಾಗಪ್ಪ (ರಾಯಚೂರು).—ಅಧ್ಯಕ್ಷರೇ, ಕಾನ್‌ಸ್ಟಿಟ್ಯೂಷನ್‌ನ 23ನೇ ತಿದ್ದುಪಡಿಗೆ ನಾನೂ ಸಹ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಈ ತಿದ್ದುಪಡಿಯ ಬಗ್ಗೆ ಈಗಾಗಲೇ ಮಾನ್ಯ ಗೆಳೆಯರಾದ ಶ್ರೀ ಗೋಪಾಲಗೌಡರು ಹೇಳಿದ್ದಾರೆ. ಆದ್ದರಿಂದ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಾನು ತಿದ್ದುಪಡಿಯನ್ನು ತಂದಿರುವ ಉದ್ದೇಶವೇ ಬೇರೆಯಾಗಿದೆ. ತಾವು ಆರ್ಟಿಕಲ್ 331 ಮತ್ತು 333 ಇವೆರಡನ್ನೂ ಸಹ ನೋಡಿದರೆ ಅದರಲ್ಲಿ ಏನಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವೆರಡು ಆರ್ಟಿಕಲ್‌ಗಳಲ್ಲಿ ಹೇಳಿರುವುದೇನೆಂದರೆ, ರಾಷ್ಟ್ರಾಧ್ಯಕ್ಷರಾಗಲೀ ರಾಜ್ಯಪಾಲರಾಗಲೀ ಪಾರ್ಲಿಮೆಂಟ್‌ಗೆ ಮತ್ತು ಶಾಸನ ಸಭೆಗೆ ಆಂಗ್ಲೋ ಇಂಡಿಯನ್ ಜನಾಂಗ ದವರನ್ನು ನಾಮಕರಣ ಮಾಡಬೇಕಾದರೆ, ಅವರು ಚುನಾವಣೆಯಲ್ಲಿ ಆರಿಸಿ ಬರುವುದು ಕಷ್ಟ ಎಂದು ತಿಳಿದುಬಂದಾಗ ಮತ್ತು ಈ ಸಭೆಗೆ ಅವರ ಅವಶ್ಯಕತೆ ಇದೆ ಎಂದು ತಿಳಿದುಬಂದಾಗ ಮಾತ್ರ ಅವರನ್ನು ನಾಮಕರಣ ಮಾಡಬೇಕು ಎಂದು ಹೇಳಿದೆ. ಇವರ ಕಮ್ಯುನಿಟಿ ಬಹಳ ಕಡಿಮೆ ಇರುವುದ ರಿಂದ ಇವರ ಪ್ರಾತಿನಿಧ್ಯ ಈ ಸಭೆಗೆ ಬೇಕು ಎಂದು ರಾಜ್ಯಪಾಲರಿಗೆ ಕಂಡುಬಂದರೆ ಮಾತ್ರ ನಾಮಕರಣ ಮಾಡಬಹುದು ಎಂದು ಆರ್ಟಿಕಲ್‌ನಲ್ಲಿ ಹೇಳಿದೆ. ಆದರೆ ಇವತ್ತಿನದಿವಸ ಈ ಕಾಂಗ್ರೆಸ್ ಸರ್ಕಾರ ಈ ಎರಡು ಆರ್ಟಿಕಲ್‌ಗಳನ್ನು ದುರುಪಯೋಗ ಮಾಡಿಕೊಂಡಿದೆ. ಆಂಗ್ಲೋ ಇಂಡಿಯನ್ಸ್ ಕಡಿಮೆ ಸಂಖ್ಯೆಯಲ್ಲಿರುವುದರಿಂದ ಇವರಿಗೆ ಪ್ರಾತಿನಿಧ್ಯ ಕೊಡುವುದಾದರೆ ಬ್ರಾಹ್ಮಣರು ಮತ್ತು ಪಾರ್ಸಿಗಳು ಸಹ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅವರಿಗೂ ಸಹ ಕೊಡಬೇಕಾಗುತ್ತದೆ. ಕೋಮುವಾರು ಆಧಾರದಮೇಲೆ ಪ್ರಾತಿನಿಧ್ಯ ಕೊಡಬೇಕು ಎನ್ನುವುದು ಈ ಘಟನೆಯ ಉದ್ದೇಶವಲ್ಲ ಒಂದು ಜಾತಿಯವರ ಪ್ರಾತಿನಿಧ್ಯ ಈ ಸಭೆಗೆ ಅವಶ್ಯಕ ಇದೆ ಎಂದು ಕಂಡುಬಂದಾಗ ಮಾತ್ರ ಅವಕಾಶ ಕೊಡುವುದು ಆವಶ್ಯಕ. ಇವತ್ತಿನದಿವಸ ಇದೇ ಕಾಂಗ್ರೆಸ್ ಸರ್ಕಾರದವರು ಜಿಲ್ಲಾ ಕೇಂದ್ರಗಳಲ್ಲಿ ಮುಸ್ಲೀಮರಿಗೆ ಕೆಲವು ಸ್ಥಳಗಳನ್ನು ಮೀಸಲಿಟ್ಟು ಅವರಿಗೆ ಟಿಕೆಟ್ ಕೊಡುತ್ತಿದ್ದಾರೆ. ಅದೇ ರೀತಿ ಹರಿಜನರಿಗೆ ಮೀಸಲು ಜಾಗಗಳನ್ನು ಇಟ್ಟಿದ್ದಾರೆ. ಇದೇ ಆಸಕ್ತಿ ಆಂಗ್ಲೋ ಇಂಡಿಯನ್ಸ್ ಬಗ್ಗೆಯೂ ಇದ್ದರೆ ಜಿಲ್ಲಾ ಕೇಂದ್ರಗಳಲ್ಲಿ ಇವರನ್ನು ಚುನಾವಣೆಗೆ ನಿಲ್ಲಿಸಿ ಆರಿಸಿ ತರಬೇಕು ಎಂಬುದು ನನ್ನ ತಿದ್ದುಪಡಿಯ ಉದ್ದೇಶವಾಗಿದೆ. ಸರ್ಕಾರದ ಪರವಾಗಿ ಇಲ್ಲಿ ಕುಳಿತು ಕೈ ಎತ್ತುತ್ತಾರೆ

(ಶ್ರೀ ಎಂ. ನಾಗಪ್ಪ)

ಎಂಬ ಕಾರಣದಿಂದ ಇವರನ್ನು ನಾಮಕರಣ ಮಾಡುವುದು ಸರಿಯಲ್ಲ. ಆಂಗ್ಲೋ ಇಂಡಿಯನ್ಸ್‌ಗೆ ಪ್ರಾತಿನಿಧ್ಯ ಕೊಡಬಾರದು ಎಂಬುದು ನನ್ನ ಉದ್ದೇಶವಲ್ಲ. ಈ ಆರ್ಟಿಕಲ್‌ಗಳನ್ನು ಈ ಕಾಂಗ್ರೆಸ್ ಸರ್ಕಾರದವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುದೇ ನನ್ನ ಟೀಕೆಯಾಗಿದೆ. ಈ ಈರೀತಿ ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ನಿಲ್ಲಿಸಬೇಕು. ಪಾರ್ಲಿಮೆಂಟ್‌ನಲ್ಲಿ ಫ್ರ್ಯಾಂಕ್ ಅಂಥೋನಿ ಅವರು ಪ್ರಾತಿನಿಧ್ಯ ಪಡೆದಿದ್ದಾರೆ. ಅವರ ಜೀವನದ ಕೊನೆಯವರೆಗೂ ಸಹ ಪ್ರಾತಿನಿಧ್ಯ ಸಿಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಆಂಗ್ಲೋ ಇಂಡಿಯನ್ಸ್ ಕಮ್ಯುನಿಟಿಯವರಲ್ಲಿ ಸಹ ಈಗ ಸಾಕಷ್ಟು ಸಂಖ್ಯೆಯಲ್ಲಿ ಬಡವರು ಇದ್ದಾರೆ. ತಮಗೆ ಪ್ರಾತಿನಿಧ್ಯ ಹೇಗಿದ್ದರೂ ಸಿಗುತ್ತದೆ ಎಂಬ ಕಾರಣದಿಂದ ಅವರು ಜನಸಾಮಾನ್ಯರ ಬಳಿ ಹೋಗಿ ಅವರ ಕಷ್ಟಸುಖಗಳನ್ನು ವಿಚಾರಿಸುತ್ತಿಲ್ಲ, ಈ ಕಾರಣದಿಂದಲಾದರೂ ಕೂಡ ಈ ಜಾತಿಯವರಿಗೆ ಪ್ರಾತಿನಿಧ್ಯ ಕೊಡುವುದನ್ನು ನಿಲ್ಲಿಸಬೇಕು. ಕಳೆದ ನಾಲ್ಕು ಚುನಾವಣೆಗಳಲ್ಲಿಯೂ ಸಹ ಇವರು ಚುನಾವಣೆಯಲ್ಲಿ ಭಾಗವಹಿಸಲಿಲ್ಲ. ಇನ್ನೂ ಎರಡು ಚುನಾವಣೆಗಳಲ್ಲಿ ಇವರು ಭಾಗವಹಿಸುವುದು ಬೇಡ ಎಂದು ಹೇಳುವುದು ಸರಿಯಲ್ಲ. ಇವರನ್ನು ಸಹ ಚುನಾವಣೆಯಲ್ಲಿ ನಿಲ್ಲಿಸಿ. ಅಲ್ಲಿ ಆರಿಸಿ ಬರದಿದ್ದರೆ, ಮುಂದೆ ಇವರ ಪ್ರಾತಿನಿಧ್ಯ ಈ ಸಭೆಗೆ ಅವಶ್ಯಕ ಎಂದು ಕಂಡುಬಂದರೆ ಮಾತ್ರ ನೇಮಕ ಮಾಡಬಹುದು. ಇವರನ್ನು ಚುನಾವಣೆಗೆ ನಿಲ್ಲಿಸದೆ ನಾಮಕರಣ ಮಾಡುವ ಪದ್ಧತಿಯನ್ನು ಇನ್ನು ಮುಂದೆಯಾದರೂ ನಿಲ್ಲಿಸಬೇಕು. ಈ ಒಂದು ದುರುಪಯೋಗ ಮುಂದುವರೆಯಬಾರದು. ಇವರನ್ನು ಚುನಾವಣೆಗೆ ಮೊದಲು ನಿಲ್ಲಿಸಬೇಕು, ಅಲ್ಲಿ ಆರಿಸಿ ಬರದಿದ್ದರೆ, ಮುಂದೆ ಇವರ ಪ್ರಾತಿನಿಧ್ಯದ ಅವಶ್ಯಕತೆ ಕಂಡುಬಂದರೆ ಮಾತ್ರ ನಾಮಕರಣ ಮಾಡಬೇಕು ಎಂಬುದಾಗಿ ಆರ್ಟಿಕಲ್‌ನಲ್ಲಿ ಹೇಳಿದೆ. ಇದನ್ನ ಕೇಂದ್ರದ ಕಾನೂನು ಮಂತ್ರಿಗಳು ಸಹ ಒಪ್ಪಿಕೊಂಡಿದ್ದಾರೆ. ಮೊದಲಿನಿಂದಲೂ ಕೂಡ ಇವರನ್ನು ನಾಮಕರಣ ಮಾಡುವುದು ಬೆಳೆದುಕೊಂಡು ಬಂದುಬಿಟ್ಟಿದೆ. ಅದನ್ನೇ ಇನ್ನು ಮುಂದೆಯೂ ಅನುಸರಿಸುವುದು ಸರಿಯಲ್ಲ. ಈ ಕಮ್ಯುನಿಟಿಯವರನ್ನು ನಾನು ವಿರೋಧಿಸುತ್ತಿಲ್ಲ. ಆದರೆ ರಾಜಕೀಯ ಪಕ್ಷಗಳು ಈ ಆರ್ಟಿಕಲ್‌ಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿವೆ. ಅದೇ ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯ ಕೊಡುವ ವಿಚಾರದಲ್ಲಿ ನನ್ನ ಅಭ್ಯಂತರವಿಲ್ಲ. ಅವರಿಗೆ ಇನ್ನೂ ಹೆಚ್ಚಿನ ಸ್ಥಾನಗಳನ್ನು ಮೀಸಲಿಟ್ಟರೂ ಕೂಡ ನನ್ನ ಅಭ್ಯಂತರವಿಲ್ಲ ಇಷ್ಟು ಹೇಳಿ ನಾನು ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಲೇಬೇಕು ಎಂದು ಸರ್ಕಾರದವರನ್ನು ಒತ್ತಾಯ ಪಡಿಸುವುದಿಲ್ಲ. ಆದರೆ ಈ ವಿಚಾರದಲ್ಲಿ ಕೇಂದ್ರದ ಮಂತ್ರಿಗಳು ಏನು ಒಂದು ಆಶ್ವಾಸನೆ ಕೊಟ್ಟಿದ್ದಾರೋ ಅದೇ ರೀತಿಯ ಆಶ್ವಾಸನೆಯನ್ನು ನಮ್ಮ ಮುಖ್ಯಮಂತ್ರಿಗಳು ಸಹ ಕೊಡಬೇಕು, ಇನ್ನು ಮುಂದೆ ಆಂಗ್ಲೋ ಇಂಡಿಯನ್ಸ್ ಜನಾಂಗದವರ ನಾಮಕರಣ ಮಾಡುವ ಪದ್ಧತಿ ಹೋಗಬೇಕೆಂದು ಹೇಳುತ್ತೇನೆ. ಕೇಂದ್ರದ ಮಂತ್ರಿಗಳು ಇವರನ್ನು ಚುನಾವಣೆಗೆ ನಿಲ್ಲಿಸುತ್ತೇವೆ, ಅಲ್ಲಿ ಗೆಲ್ಲದಿದ್ದ ಪಕ್ಷದಲ್ಲಿ, ಮುಂದೆ ಅವರ ಅವಶ್ಯಕತೆ ಕಂಡುಬಂದರೆ ಮಾತ್ರ ನಾಮಕರಣ ಮಾಡುತ್ತೇವೆ ಎನ್ನುವ ಆಶ್ವಾಸನೆ ಕೊಟ್ಟಿದ್ದಾರೆ, ಅದೇ ರೀತಿಯ ಆಶ್ವಾಸನೆಯನ್ನು ನಮ್ಮ ಮುಖ್ಯಮಂತ್ರಿಗಳು ಸಹ ಕೊಡಬೇಕೆಂದು ಕೇಳಿಕೊಂಡು ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಲೇಬೇಕು ಎಂದು ಒತ್ತಾಯ ಪಡಿಸದೆ ಈ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರು).—ಮಾನ್ಯ ಅಧ್ಯಕ್ಷರೇ, ಹರಿಜನರ ರಾಜಕೀಯದ ಹಕ್ಕಿನ ವಿಚಾರದಮೇಲೆ ನೂರಾರು ಜನ ಮಾತನಾಡಿದ್ದಾರೆ. ಇದು ಅಗಾಧವಾದ ವಿಚಾರ. ಸ್ವತಂತ್ರ್ಯ ಬಂದು 20 ವರ್ಷವಾದರೂ ಕೂಡ ಈ ಜನಗಳು ಎಷ್ಟು ಪ್ರಗತಿಯನ್ನು ಹೊಂದಬೇಕಾಗಿತ್ತೋ ಅಷ್ಟು ಹೊಂದಿಲ್ಲ, ಆದ್ದರಿಂದ ಅವರಿಗೆ ಈ ರೂಪದಲ್ಲಿ ಅವರ ಹಕ್ಕು ಬಾಧ್ಯತೆಗಳನ್ನು ಮುಂದುವರಿಸಿಕೊಂಡು ಹೋಗಬೇಕು, ರಾಜಕೀಯವಾಗಿ ಈ ಹಕ್ಕುಗಳನ್ನು ಅವರಿಗೆ ಮುಂದುವರಿಸಬೇಕೆಂಬ ವಿಚಾರವಲ್ಲ ಈ ಮಸೂದೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ, ರಾಜ್ಯಾಂಗಕ್ಕೆ ತಿದ್ದುಪಡಿಯನ್ನೂ ಕೂಡ ಸೂಚಿಸಿದ್ದಾರೆ. ಹತ್ತು ವರ್ಷಕ್ಕೆ ಒಮ್ಮೆ ಈ ಜನಗಳ ಪ್ರಗತಿ ಎಷ್ಟಾಗುತ್ತದೆ ಎಂಬುದನ್ನು ಡಾಕ್ಟರು ಜ್ವರ ಬಂದಿದೆಯೋ ಇಲ್ಲವೇ ಎಂಬುದನ್ನು ಹೇಗೆ ಪರೀಕ್ಷೆ ಮಾಡುತ್ತಾರೆಯೋ ಹಾಗೆ ಪರೀಕ್ಷೆ ಮಾಡುತ್ತಿರುವುದು ನಮ್ಮ ಕಣ್ಣಿಗೆ ಕಾಣುತ್ತಿಲ್ಲ. ಈ 20 ವರ್ಷಗಳಲ್ಲಿ ಈ ಜನಗಳ ಸಮಸ್ಯೆಯನ್ನು ಹತ್ತು ಭಾಗವಾಗಿ ಮಾಡಿಕೊಂಡು ಎರಡು ವರ್ಷಕ್ಕೆ ಒಮ್ಮೆ ಒಂದೊಂದು ಸಮಸ್ಯೆಯನ್ನು ಬಗೆಹರಿಸಿಕೊಂಡು ಒರಶಕ್ಕ ಪ್ಲಾನ್ ಮಾಡಿದ್ದರೆ ಚೆನ್ನಾಗಿತ್ತು. ಈ ಪ್ಲಾನ್ ಮಾಡುತ್ತಾರೆಯಲ್ಲಾ ಅವರ ತಲೆಯಲ್ಲಿ ಹೆಚ್ಚಿನ ಬುದ್ಧಿ ಇದ್ದರೆ ಕುಡಿಯುವ ನೀರಿನ ಸಮಸ್ಯೆ ಎರಡು ವರ್ಷದಲ್ಲಿ, ಸ್ಕೂಲ್ ಸ್ಥಾಪನೆ ಮಾಡುವುದು ಎರಡು ವರ್ಷದಲ್ಲಿ, ಭೂಮಿ ಹಂಚುವುದು ಎರಡು ವರ್ಷದಲ್ಲಿ,

ಊರಿನಲ್ಲಿ ಸ್ಕೈಟ್ ಕೊಡುವುದು ಎರಡು ವರ್ಷದಲ್ಲಿ. ಐ.ಎ.ಎಸ್. ಆಫೀಸರುಗಳ ಕೆಲಸ ಕೊಡುವುದು ಎರಡು ವರ್ಷಗಳಲ್ಲಿ ಹೀಗೆ ಒಂದು ಕಾರ್ಯಕ್ರಮ ಇಟ್ಟುಕೊಂಡು ಮಾಡಿದ್ದರೆ ಈ 20 ವರ್ಷಗಳಲ್ಲಿ ಅವರು ಮೇಲ್ ಮಟ್ಟಕ್ಕೆ ಬರುತ್ತಾ ಇದ್ದರು. ಒಂದೊಂದು ಯೋಜನೆಯಲ್ಲಿ ಎರಡೆರಡು ಸಮಸ್ಯೆ ಬಗೆಹರಿಸಿದ್ದರೆ 8 ಸಮಸ್ಯೆಗಳು ಬಗೆಹರಿಯುತ್ತಿದ್ದವು, ಹರಿಜನರ ಪ್ರಗತಿಯಾಗುತ್ತಾ ಇತ್ತು. ಈ ಯೋಜನೆಗಳಲ್ಲಿ ಅವರ ಪ್ರಗತಿ ಯದ್ವಾತದ್ವಾ ಆಗಿದೆ ಎಂದು ಅನಿಸುತ್ತದೆ. ಈ ಅಸ್ಪೃಶ್ಯತೆ ಯಾವಾಗ ಹುಟ್ಟಿತೋ ಗೊತ್ತಿಲ್ಲ, ಯಾವಾಗ ಬೆಳೆಯಿತೋ ಗೊತ್ತಿಲ್ಲ. ಇದು ಹೋಗುತ್ತದೆ ಎಂಬ ಕನಸು ಅನೇಕರು ಇಟ್ಟುಕೊಂಡಿದ್ದಾರೆ, ಕನಸು ಕಟ್ಟಿಕೊಂಡಿದ್ದವರು ಅನೇಕರು ಸತ್ತುಹೋದರು. ಈ ರೀತಿಯಲ್ಲ ನಡೆಯುವುದಾದರೆ ಹರಿಜನರು ಅಸ್ಪೃಶ್ಯರಾಗಿಯೇ ಉಳಿದು ಕೊಂಡು, ಅವರಿಗೆ ಸಹಾಯ ಸರ್ಕಾರದ ಮುಖೇನ ದೊರೆಯುತ್ತದೆ ಎಂಬ ಒಂದು ಸೋಗಿನಲ್ಲಿ ಯಾವ ಪ್ರಯೋಜನವೂ ಆಗದೆ ತೂಕಡಿಸುವವರಿಗೆ ತಲೆದಿಂಬು ಇದ್ದಹಾಗೆ ಅಂತೂ ಹೇಗೂ ನಮಗೆ ಸರ್ಕಾರದವರು ಸಹಾಯ ಮಾಡುತ್ತಾರೆ ಎಂಬ ಮನೋಧರ್ಮ ಇದರಿಂದ ಬೆಳೆಯುತ್ತದೆ. ಇಂತಹ ಒಂದು ಅಪಾಯ ಇದೆ. ಇವತ್ತಿನ ದಿವಸ ಈ ಸಭೆಯಲ್ಲಿ ಹರಿಜನರು 31 ಜನ ಇದ್ದೇವೆ, ನಮ್ಮ ಪಕ್ಷದಲ್ಲಿ 20 ಜನ ಇದ್ದೇವೆ ಇಷ್ಟಾದರೂ ಕೂಡ ನಾವು ಹೇಳುವುದನ್ನು ಸರ್ಕಾರದವರಾಗಲಿ, ಮಾನ್ಯ ಮಂತ್ರಿಗಳಾಗಲಿ ಕೇಳುತ್ತಾರೆಯೇ ನಮಗೆ ನ್ಯಾಯ ದೊರಕುತ್ತದೆಯೇ ಎಂದರೆ ಇಲ್ಲ ಎಂದು ಹೇಳಬೇಕಾಗುತ್ತದೆ. ಹಿಂದೆ ಒಂದು ಸಲ 35 ಜನ ಸಹಿ ಮಾಡಿ 31 ಮತ್ತು 4 ಜನ ಸಿಂಪತೈಸರ್ಸ್ ಒಟ್ಟು 35 ಜನ ಮುಖ್ಯಮಂತ್ರಿಗಳಿಗೆ ಒಂದು ರೆಪ್ರಸೆಂಟೇಷನ್ ಕೊಟ್ಟಿದ್ದೆವು. ಯಾರಾದರೂ ಒಬ್ಬ ಎಂ.ಎಲ್.ಎ. ಕಾಗದ ಬರೆದರೆ ಹಿಂದೆ ಎಂಡಾರ್ಸ್‌ಮೆಟ್ ಕೊಡುವ ಪದ್ಧತಿ ಇತ್ತು, 35 ಜನ ಬರೆದರೂ ಕೂಡ ಯಾರೊಬ್ಬರಿಗೂ ಕೂಡ ಎಂಡಾರ್ಸ್‌ಮೆಂಟ್ ಕೊಟ್ಟಿಲ್ಲ. ಹಾಗಿರುವಾಗ ನಮ್ಮ ನಂಬರು 31 ಇದ್ದರೇನು 300 ಇದ್ದರೇನು ? ಇಂತಹ ಒಂದು ನಿರುತ್ಸಾಹ ಬರುವಂತಹ ರೀತಿಯಲ್ಲಿ ಸರ್ಕಾರದ ಕೆಲಸಕಾರ್ಯಗಳು ನಡೆದರೆ ಯಾರಿಗೂ ಸಂತೋಷವಿಲ್ಲ. ಆದ್ದ ರಿಂದ ಹರಿಜನರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ ಆದ್ದರಿಂದ ಇದನ್ನು ಮುಂದುವರಿಸುತ್ತಾರೆ ಎಂಬುದು ನಂಬುತಕ್ಕ ಮಾತಲ್ಲ. ಶ್ರೀಮಾನ್ ಸಿದ್ಧವೀರಪ್ಪನವರು ಹರಿಜನ ಮಂತ್ರಿಗಳು ಅಲ್ಲಿ ಕುಳಿತಿದ್ದಾಗ ಅವರ ಬೊಜ್ಜು ಬೆಳೆದರೆ ಸಾಕು ಅದಕ್ಕೇನು ಬೇಕೋ ಅಷ್ಟನ್ನು ಮಾಡುತ್ತಾರೆ ಎಂದು ಹೇಳಿದರು. ತಮ್ಮ ತಮ್ಮ ಪ್ರತಿಷ್ಠೆ, ಬೆಂಬಲವನ್ನು ಉಳಿಸಿಕೊಳ್ಳುವುದಕ್ಕೆ ಡೆಲ್ಲಿಯಿಂದ ಹಿಡಿದು, ಹಳ್ಳಿಯ ವರೆಗೂ ಹರಿಜನರ ಸಹಾಯದಿಂದ ತಮ್ಮ ಸ್ಥಾನ ಉಳಿಸಿಕೊಂಡು ಬರುತ್ತಾರೆ. ಅವರ ಸಮಸ್ಯೆ ಗಳು ಈಗ ಸರಿಹೋಗುತ್ತದೆ ಮುಂದಿನ ವರ್ಷ ಸರಿಹೋಗುತ್ತದೆ ಎಂದು ನೋಡಿದ್ದಾಯಿತು, ಅಸ್ಪೃಶ್ಯತೆ ಇನ್ನೂ ಹೋಗಿಲ್ಲ ; ಇದು ಮೂರನೆಯ ಎಕ್ಸ್‌ಟೆನ್‌ಷನ್ ; ಈಗ ಯಾವ ರೀತಿ ಯಾಗುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಇನ್ನೂ ಹತ್ತು ವರ್ಷ ಏಕೆ ಎಲ್ಲಿಯವರೆಗೆ ಹರಿಜನರಿಗೆ ಕುಡಿಯುವ ನೀರಿನ ಬಾವಿ ಇಲ್ಲವೋ ಇದ್ದರೂ ಪ್ರತ್ಯೇಕವಾಗಿರುತ್ತದೆಯೋ, ಎಲ್ಲಿಯ ವರೆಗೆ ಹಿಂದೂ ಸಮಾಜದಲ್ಲಿ ಊರು ಇದ್ದ ಕಡೆ ಹೊಲಗೇರಿ ಪದ್ಧತಿ ಇರುತ್ತದೆಯೋ ಅಲ್ಲಿಯವರೆಗೂ ಕೂಡ ಇಂತಹ ಎಕ್ಸ್‌ಟೆನ್ಷನ್‌ಗಳನ್ನು ಖಂಡಿತವಾಗಿಯೂ ಕೂಡ ಕೊಟ್ಟರೆ ಪ್ರಯೋಜನವಾಗುತ್ತದೆ ಎಂದು ನಂಬಿಕೊಂಡಿದ್ದೇನೆ. ನಮ್ಮ ಸರ್ಕಾರದವರು ಈ ಬಗ್ಗೆ ಪ್ರೋಗ್ರಾಂ ಪ್ರಕಾರ ಕೆಲಸ ಮಾಡುತ್ತಿಲ್ಲ. ಇವರು ಮಾಡುತ್ತಿರುವುದೆಲ್ಲಾ ಹರಿಜನೋದ್ಧಾರ ಎಂದು ಭಾವಿಸಿದರೆ ತಪ್ಪಾದೀತು. ಇದು ಒಂದು ನ್ಯಾಷನಲ್ ಪ್ರಾಬ್ಲಂ ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಇದನ್ನು ಸರಿಪಡಿಸದೇ ಹೋದರೆ ಒಂದಲ್ಲ ಒಂದು ದಿವಸ ನಮ್ಮ ಸ್ವಾತಂತ್ರ್ಯಕ್ಕೇ ಧಕ್ಕೆ ಬಂದೀತು ಎಂಬುದನ್ನು ನಾವೋ ನಮ್ಮ ಮಕ್ಕಳೋ ದೇಶದಲ್ಲಿ ನೋಡಬೇಕಾಗಿ ಬಂದೀತು. ಆದ್ದರಿಂದ ಹರಿಜನೋದ್ಧಾರ ಎಂಬುದನ್ನು ಇದು ಒಂದು ಕೋಮಿನ ಉದ್ಧಾರ ಎಂದು ಹೇಳಿ ಯಾರೂ ಕೂಡ ಭಾವಿಸಬಾರದು. ಇದನ್ನು ರಾಷ್ಟ್ರೀಯ ಸಮಸ್ಯೆಯನ್ನಾಗಿ ಭಾವಿಸಿ ಎದುರಿಸಬೇಕು. ಸರ್ಕಾರ ದವರು ನಮಗೆ ಕೊಡಬೇಕಾದ ಗಮನವನ್ನು ಕೊಡದೇ ಹೋದಲ್ಲಿ ನಾವು ಎಷ್ಟು ಜನ ಇದ್ದರೇನು ಮತ್ತು ಇಂತಹ ರಾಜಕೀಯ ಹಕ್ಕಿನ ಎಕ್ಸ್‌ಟೆನ್ಷನ್‌ಗಳನ್ನು ಎಷ್ಟು ಕೊಟ್ಟರೆ ತಾನೆ ಏನು ಪ್ರಯೋಜನ ಎಂದು ಮನನೊಂದು ಹೇಳಿದರು, ಇವರ ಸಮಸ್ಯೆಗಳು ಬಗೆಹರಿಯುವವರೆಗೆ ಹತ್ತು ವರ್ಷ ಅಲ್ಲ ಎಷ್ಟು ವರ್ಷ ಆಗುತ್ತದೆಯೋ ಅಲ್ಲಿಯವರೆಗೂ, ಭಾರತದ ಸತ್ಪ್ರಜೆಯಾಗಿ ಎಲ್ಲರೂ ಸರಿಸಮಾನರಾಗಿ ಬಾಳ್ವೆಕೆ ಮಾಡುವ ಕಾಲ ಬರುವವರೆಗೂ ಈ ಎಕ್ಸ್‌ಟೆನ್ಷನ್ ಬೇಕೇ ಬೇಕು, ಅಲ್ಲಿಯವರೆಗೂ ಎಷ್ಟೇ ಯೋಜನೆಯನ್ನು ಮಾಡಿದರೂ ಏನೇ ಮಾಡಿದರೂ ಕೂಡ ಸಮಾಜದಲ್ಲಿ ನಮ್ಮ ಹಕ್ಕು ತುಸು ಕಡಿಮೆ ಎಂಬ ಭಾವನೆ ನಮ್ಮ ಜನಗಳಲ್ಲಿ ಬಂದಿದೆ. ಇದು ಹೋಗಿ ನಾವೂ ಎಲ್ಲರಂತೆಯೇ ಪ್ರಜೆಗಳು, ಮಾನವರು ಎಂಬುದು ಮೂಡಿಬರಬೇಕು.

†ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಶ್ರೀನಿವಾಸಪುರ).—ಸನ್ಮಾನ್ಯ ಅಧ್ಯಕ್ಷರೇ, ಸಭೆಯ ಎದುರಿಗೆ ಇರತಕ್ಕ ಈ ತಿದ್ದುಪಡಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಸ್ವಾಮಿ, ಹರಿಜನರ ಏಳಿಗೆಯಾಗಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ. ದೇಶದಲ್ಲಿರತಕ್ಕ ಎಲ್ಲರೂ ಕೂಡ ಹರಿಜನರ ಏಳಿಗೆಯಾಗಬೇಕೆಂದು ಅಪೇಕ್ಷೆಪಡುತ್ತಾ ಇದ್ದಾರೆ. ಆದರ ಈಗ ಬಂದಿರುವ ತಿದ್ದುಪಡಿ ಅವರ ಏಳಿಗೆಗಾಗಿ ಸಾಧನವಾಗಬಹುದು ಎಂದು ಅಷ್ಟು ಮಾತ್ರ ಹೇಳುತ್ತೇನೆ. ಇದು ಒಂದರಿಂದಲೇ ಸಾಧ್ಯವಾಗುತ್ತದೆ ಎಂದು ಅಲ್ಲ, ಸರ್ಕಾರದವರು 20 ವರ್ಷಗಳಿಂದ ಅನೇಕ ವಿಧವಾದ ಯೋಜಗಳನ್ನು ಹಾಕಿಕೊಂಡು ಸಾಕಾದಷ್ಟು ಕೆಲಸ ಮಾಡುತ್ತಾ ಇದ್ದಾರೆ, ಆದರೂ ಕೂಡ ಏಕೆ ಹರಿಜನರ ಏಳಿಗೆಯಾಗಿಲ್ಲ ಎಂದು ಪ್ರಶ್ನೆ ಮಾಡಬೇಕಾಗಿದೆ. ಇನ್ನು ಬಿಚ್ಚಿದ ಮನಸ್ಸಿನಿಂದ ಹೇಳಬೇಕಾದರೆ ಸರ್ಕಾರದವರು ಸರಿಯಾದ ಒಂದು ಯೋಜನೆಯನ್ನು ಹಾಕಿಕೊಂಡು ಅವರ ಬಗ್ಗೆ ತೀವ್ರ ಗಮನಕೊಟ್ಟು ಸಹಾಯ ಮಾಡಿಲ್ಲ ಎಂದು ಹೇಳಬೇಕಾಗಿದೆ. ಇಷ್ಟರ ಜೊತೆಗೆ ಇನ್ನೂ ಒಂದು ಮಾತನ್ನು ಹೇಳಬೇಕಾಗಿದೆ, ಇದರಿಂದ ಹರಿಜನರು ಯಾರೂ ಭಿನ್ನಾಭಿಪ್ರಾಯ ಪಡಬಾರದು. ಆಂತರಿಕವಾಗಿ ಸಮಾಜ ಸುಧಾರಣೆಯಾಗಬೇಕಾದರೆ ಅದಕ್ಕೆ ಸಂಬಂಧಪಟ್ಟಂಥ ಪ್ರತಿಯೊಬ್ಬರೂ ಕೂಡ ಸಹಕರಿಸಿ ಮುಂದೆ ಬಂದರೆ ಒಳ್ಳೆಯದು. ಸಮಾಜ ಸುಧಾರಣೆಯನ್ನು ಮಾಡಲು ಕೇವಲ ಸರ್ಕಾರ ಜವಾಬ್ದಾರಿ ತೆಗೆದುಕೊಂಡು ಅದಕ್ಕೆ ಬೇಕಾದಷ್ಟು ಹಣ ಒದಗಿಸಿದರೆ ಹರಿಜನೋದ್ಧಾರವಾಗುವುದಿಲ್ಲ. ಇದಕ್ಕೆ ಮೊದಲು ಮುಖ್ಯವಾಗಿ ಹಿಂದೂ ಸಮಾಜದಲ್ಲಿರತಕ್ಕ ಹರಿಜನರು ಬಿಟ್ಟು ಮಿಕ್ಕ ಎಲ್ಲಾ ವರ್ಗದವರೂ ಹರಿಜನರನ್ನು ತಮ್ಮ ತಮ್ಮಂದಿರು ಎಂದು ಭಾವಿಸಿದರೆ ಈ ಕೆಲಸ ಕಾರ್ಯತಃ ಸಾಧ್ಯವಾಗುತ್ತದೆಯೇ ಹೊರತು ಕೇವಲ ಭಾಷಣಗಳಿಂದ ಅಥವಾ ಸರ್ಕಾರದ ಸೌಕರ್ಯಗಳಿಂದ ಸಮಾಜ ಸುಧಾರಣೆಯಾಗಬೇಕೆಂದರೆ ಅದು ಕಲ್ಪನೆಯೇ ಹೊರತು ಎಂದೆಂದಿಗೂ ಸಾಧ್ಯವಾಗುವುದಿಲ್ಲ. ಈ ವಿಚಾರದಲ್ಲಿ ಕೆಲಮಟ್ಟಿಗೆ ಹೇಳಬೇಕಾದರೆ ಹರಿಜನರ ನಾಯಕರು ಮುಂದೆ ಬಂದಿದ್ದಾರೆ, ಯಾರು ಮಂತ್ರಿಗಳಾಗಿದ್ದಾರೋ, ಯಾರು ಗಣ್ಯ ಸ್ಥಾನದಲ್ಲಿದ್ದಾರೋ ಅವರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಏಕೆಂದರೆ ಮಹಾತ್ಮ ಗಾಂಧಿಯವರು ಎಲ್ಲೋ ಬಿಡಾರ ಮಾಡಿದರೂ ಸಹ ಹರಿಜನರ ಕಾಲೋನಿಯಲ್ಲಿ ಬಿಡಾರ ಮಾಡುತ್ತಾ ಇದ್ದರು. ಉದ್ದೇಶ ಏನಿತ್ತು! ಅದರಿಂದ ಜ್ಞಾನೋದಯವಾಗಿ, ಅವರು ಶುಚಿರ್ಭೂತರಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ ಎಂದು ಆ ರೀತಿ ಮಾಡುತ್ತಾ ಇದ್ದರು. ಆದರೆ ಈಗ ಆಗಿರತಕ್ಕದ್ದು ಏನು? ಸಮಾಜ ಕಲ್ಯಾಣ ಇಲಾಖೆಯಲ್ಲಿ ಬ್ರಾಹ್ಮಣರು ಅಧಿಕಾರಿಗಳಾಗಿದ್ದಾಗ ಎಷ್ಟೋ ಜನ ಭಯ ಭಕ್ತಿಯಿಂದ ಹರಿಜನರ ಕೇರಿಗಳಿಗೆ ಹೋಗಿ ಅವರ ಜೊತೆಯಲ್ಲಿ ಕಲೆತು, ಮಾತನಾಡಿ ಎಷ್ಟೋ ಸಹಾಯ ಮಾಡುತ್ತಿದ್ದರು. ಈಚೆಗೆ ನಿಮ್ಮ ವರ್ಗದವರನ್ನೇ ಸ್ಪೆಷಲ್ ಅಧಿಕಾರಿಗಳಾಗಿ ಮಾಡಿದ್ದಾರೆ. ಯಾವ ಸ್ಪೆಷಲ್ ಅಧಿಕಾರಿ ಯಾವ ಹರಿಜನ ಕೇರಿಗೆ ಹೋಗಿದ್ದಾರೆ ಎನ್ನುವುದನ್ನು ಹೇಳಲಿ. ನಾನು ಕಣ್ಣಾರೆ ನೋಡಿದ್ದನ್ನು ಹೇಳುತ್ತಿದ್ದೇನೆ. ಇವರು ಒಳಗಡೆ ಕುರ್ಚಿಯಲ್ಲಿ ಕುಳಿತುಕೊಂಡಿದ್ದರೆ, ಹೊರಗಡೆ ಬಾಗಿಲಲ್ಲಿ ಬಡವರು ಕಾಯುವಂತೆ ಮಾಡುತ್ತಾರೆ. ಹರಿಜನ ನಾಯಕರಾದರೂ ಸಹ ಅವರಿಗೆ ಸರಿಯಾದ ತಿಳುವಳಿಕೆ ಕೊಟ್ಟು ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗುವಂತೆ ಮಾಡುವುದು ಅನಿವಾರ್ಯವಾಗಿದೆ.

ಆರ್ಥಿಕ ಲಾಕ್ಷಣೆಯೇ ದೊಡ್ಡ ತೊಂದರೆಯಾಗಿದೆ. ನನಗೆ ತಿಳಿದಮಟ್ಟಿಗೆ ಕಾನೂನಿನಲ್ಲಿ ಅಸ್ಪೃಶ್ಯತೆ ಇಲ್ಲ. ದೇವಾಲಯ ಪ್ರವೇಶಕ್ಕೆ ಅವಕಾಶವಿದೆ, ಹೋಟಲುಗಳಿಗೆ ಹೋಗಲು ಪ್ರತಿಬಂಧಕವಿಲ್ಲ. ಆದರೂ ಕೂಡ ಎಲ್ಲರಿಗೂ ಆರ್ಥಿಕ ಚೈತನ್ಯವಿಲ್ಲದೆ ಇರುವುದರಿಂದ ಹರಿಜನರು ಬಲಾತ್ಕಾರ ಮಾಡಿದರೂ ಬರುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಕೊಳಕು ಬಟ್ಟೆ ಹಾಕಿಕೊಂಡು ಹೇಗೆ ಹೋಗುವುದು ಎಂದು ಕೇಳುತ್ತಾರೆ. ಹರಿಜನ ಸಮಾಜದಲ್ಲಿ ಕೂಡ ಚೊಕ್ಕಟವಾದ ಬಟ್ಟೆ ಹಾಕಿಕೊಂಡಿರುವವರ ಬಳಿಯಲ್ಲಿ ಕೊಳಕು ಬಟ್ಟೆ ಹಾಕಿಕೊಂಡಿರುವವರು ಹೋಗುವುದಕ್ಕೆ ಹಿಂಜರಿಯುತ್ತಾರೆ. ಮೈಸೂರು ದೇಶದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದ ಕಾಂಗ್ರೆಸ್ ಮಂತ್ರಿಮಂಡಲದಲ್ಲಿ ಹರಿಜನ ಮಂತ್ರಿಗಳು ಇದ್ದಾರೆ. ಕೊಳಕು ಬಟ್ಟೆ ಹಾಕಿರುವವರು ಬಂದರೆ ಮಂತ್ರಿಗಳ ಮನೆಯಲ್ಲಿ ಅವರಿಗೆ ಸ್ಥಾನವಿಲ್ಲ. ಹರಿಜನರಲ್ಲಿ ಎಡಗೈ ಬಲಗೈ ಎಂಬ ಭೇಧವಿದೆ. ಅದನ್ನು ಕೂಡ ಅವರು ಇನ್ನೂ ಸರಿಪಡಿಸಿಕೊಂಡಿಲ್ಲ. ಇದನ್ನು ಕೇಳಿದರೆ ನಾನು ಅವರನ್ನು ದೂರುತ್ತೇನೆಂದು ಭಾವಿಸಬಾರದು. ಅವರಲ್ಲಿರುವ ಒಳಭೇದಗಳು ಕೂಡ ಸರಿಹೋಗಬೇಕು. ಅನೂಚಾನವಾಗಿ, ಬಹಳ ಕಾಲದಿಂದ ಬೆಳೆದು ಬಂದಿರುವ ಕಳಂಕ ಒಂದೇ ದಿವಸದಲ್ಲಿ ಸುಧಾರಣೆಯಾಗುತ್ತದೆ ಎನ್ನುವುದು ಸಾಧ್ಯವಿಲ್ಲದ ಮಾತು. ಅದನ್ನು ಸುಧಾರಣೆ ಮಾಡುವುದಕ್ಕೆ ಎಲ್ಲರೂ ಕೂಡ ದಯವಿಟ್ಟು ಶ್ರಮಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಯಾವ ತಂದೆ ತಾಯಿಯಾಗಲಿ ತಮ್ಮ ಮಗುವನ್ನು ಪ್ರೀತಿಸುತ್ತಾರೆ. ಆದರೆ ಮಕ್ಕಳು ಚೊಕ್ಕಟವಾಗಿದ್ದರೆ ಅವರಿಗೆ ಮುತ್ತಿಡುತ್ತೇವೆ. ನಣ್ಣ ಮಕ್ಕಳು ಗಲೀಜಾಗಿದ್ದರೆ ಅಸಹ್ಯ ಪಡುತ್ತೇವೆ, ಮುಟ್ಟುವುದಿಲ್ಲ. ಮುಖ್ಯವಾಗಿ ಬೇಕಾಗಿರುವುದು ಆರ್ಥಿಕ ಚೈತನ್ಯ. ಅದನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಸರ್ಕಾರದವರು ಹೆಚ್ಚಿನ ವಿದ್ಯಾ ಪ್ರಗತಿಗೆ ಸಾಕಾದಷ್ಟು ಸೌಕರ್ಯಗಳನ್ನು ಮತ್ತು ಆರ್ಥಿಕ ಚೈತನ್ಯವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಕಾದಷ್ಟು ಅವಕಾಶವನ್ನು ಮಾಡಿಕೊಟ್ಟು ಹರಿಜನರನ್ನು ಉದ್ಧಾರ ಮಾಡಬೇಕು. ಸವರ್ಣ ಹಿಂದೂಗಳು ಮತ್ತು ಹಿಂದೂ ನಾಯಕರು, ಹರಿಜನ ನಾಯಕರು ಎಲ್ಲರೂ ಶ್ರಮಿಸಿ ಅವರನ್ನು ಮುಂದಕ್ಕೆ ತಂದರೆ ದೇಶ ಉದ್ಧಾರವಾಗುತ್ತದೆ ಮತ್ತು ಮಹಾತ್ಮಾಜಿ ಅವರ ಆತ್ಮಕ್ಕೆ ಶಾಂತಿ ಯನ್ನು ಕರುಣಿಸಿದಂತಾಗುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪುಟ್ಟಸ್ವಾಮಿ.—ಅಧ್ಯಕ್ಷರೇ, ಮಾನ್ಯ ಸದಸ್ಯರನೇಕರು ಈ ನಿರ್ಣಯದ ಮೇಲೆ ಮಾತನಾಡಿದ್ದಾರೆ. ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರೂ ಕೂಡ ಈ ನಿರ್ಣಯ ವನ್ನು ಪುಷ್ಟೀಕರಿಸಿ ಮಾತನಾಡಿದ್ದಾರೆ. ಇದರ ಅಗತ್ಯತೆ ಇದೆ ಎನ್ನುವುದರಲ್ಲಿ ಅಭ್ಯಂತರವಿಲ್ಲ.

ಮಾನ್ಯ ಸದಸ್ಯರಾದ ಪ್ರಭಾಕರ್ ಅವರು ಒಂದು ಮಾತು ಹೇಳಿದರು ; ಹರಿಜನರ ಗಿರಿಜನರ ಸಮಸ್ಯೆ ರಾಷ್ಟ್ರದ ಸಮಸ್ಯೆ ಎಂದು. ನಿಜವಾಗಿಯೂ ಇದು ರಾಷ್ಟ್ರದ ಸಮಸ್ಯೆ. ಈ ರಾಷ್ಟ್ರ ಸಮಸ್ಯೆಯನ್ನು, ಇಷ್ಟು ಜಟಿಲವಾಗಿರತಕ್ಕ ಸಮಸ್ಯೆಯನ್ನು ಕೇವಲ ಸರ್ಕಾರಗಳು ಬಿಡಿಸಲಾರವು. ಸಮಾಜ ಇದರಲ್ಲಿ ಬಹುಮುಖ ಪಾತ್ರವನ್ನು ವಹಿಸಬೇಕಾಗಿದೆ. ಸ್ವಾತಂತ್ರ್ಯ ಬರುವ ಮುನ್ನ ಹರಿಜನ ಗಿರಿಜನರ ಸಮಸ್ಯೆಯ ನಿವಾರಣೆಗೆ ಸಮಾಜದ ಮುಖಂಡರು ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದರು. ಈಗ ಜನರ ಮನೋಭಾವನೆ ಬದಲಾಗುತ್ತಿದೆ. ನಮ್ಮ ದುರದೃಷ್ಟದಿಂದ ಸ್ವಾತಂತ್ರ್ಯ ಬಂದಮೇಲೆ ರಾಷ್ಟ್ರದ ಸಮಸ್ಯೆಯನ್ನು ನಿವಾರಣೆ ಮಾಡತಕ್ಕ ಜವಾಬ್ದಾರಿ ಸಮಾ ಜದ್ದು ಎನ್ನುವುದಕ್ಕೆ ಬದಲಾಗಿ ಸರ್ಕಾರದ್ದು ಎನ್ನುವಂಥ ಮನೋಭಾವನೆ ಬೆಳೆಯುತ್ತಿದೆ. ಆ ಕಾರಣದಿಂದ ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ಕೈಗೊಂಡರೂ ಪರಿಣಾಮಕಾರಿಯಾದ ಫಲತಾಂಶಗಳನ್ನು ನೋಡುವುದಕ್ಕಾಗುತ್ತಿಲ್ಲ.

ಮಾನ್ಯ ಸದಸ್ಯರಾದ ಸಿದ್ಧವೀರಪ್ಪನವರು ಹೇಳಿದರು, ಹರಿಜನರಿಗೆ ಭೂಮಿಯನ್ನು ಕೊಡು ತ್ತೀರಿ, ಅದು ಯಾರ ಕೈಯಲ್ಲಿದೆ ಎನ್ನುವುದನ್ನು ನೋಡಬೇಕು ಎಂದು. ಅವರು ಹೇಳುವುದು ಸ್ವಲ್ಪಮಟ್ಟಿಗೆ ನಿಜ. ಹರಿಜನರಿಗೆ ಕೊಟ್ಟ ಭೂಮಿ ಬೇರೆಯವರ ಕೈ ಸೇರುತ್ತದೆ. ಏಕೆ ಸೇರು ತ್ತದೆ ಎಂದರೆ ಸಮಾಜ ಇದರಲ್ಲಿ ಸಹಕರಿಸುತ್ತಿಲ್ಲ ಎನ್ನುವುದು ಸ್ಪಷ್ಟ. ಸರ್ಕಾರ ಏನು ಪ್ರಯತ್ನ ಮಾಡಿದರೂ ಕೂಡ ಸಮಾಜದ ಮುಖಂಡರು ಸಹಕರಿಸದ ಹೊರತು ಹರಿಜನರ ಏಳಿಗೆಯಾಗಲಾರದು ಎನ್ನುವುದು ನನ್ನ ಅಭಿಪ್ರಾಯ. ಮಾನ್ಯ ಸಿದ್ಧವೀರಪ್ಪನವರು ಮತ್ತೊಂದು ಅಂಶವನ್ನೂ ಹೇಳಿದರು. ವಿದ್ಯಾಭ್ಯಾಸದಲ್ಲಿ ಹರಿಜನರು ಮುಂದುವರಿಯುವುದಕ್ಕಾಗುತ್ತಿಲ್ಲ ಎಂದು. ಅದೂ ನಿಜ. ಹರಿಜನರು ಹಿಂದುಳಿದ ವರ್ಗದವರು, ರೈತಾಪಿ ಕಸಬನ್ನು ಅನುಸರಿಸಿಕೊಂಡಿರುವವರು, ವ್ಯವಸಾಯ ಕಾರ್ಮಿಕರು ಹೀಗೆ ಎಲ್ಲರೂ ಹಳ್ಳಿಗಳಲ್ಲಿ ವಾಸಮಾಡುತ್ತಿದ್ದಾರೆ. ನಮ್ಮ ವಿದ್ಯಾ ಭ್ಯಾಸದ ಕ್ರಮವನ್ನು ನೋಡಿದರೆ ವಿದ್ಯಾಭ್ಯಾಸದಲ್ಲಿ ನಮ್ಮ ಮಕ್ಕಳು ಸಾಧಿಸುತ್ತಿರುವ ಪ್ರಗತಿ ಯನ್ನು ನೋಡಿದರೆ ಹಳ್ಳಿಯವರು, ಹಳ್ಳಿಯಿಂದ ಬಂದಂಥ ಮಕ್ಕಳು ಬಹಳ ಹಿಂದುಳಿದಿದ್ದಾರೆ. ಇದರಲ್ಲಿ ಒಂದು ರೀತಿಯ ಪೈಪೋಟಿ ಇದೆ. ಒಬ್ಬ ದೃಢಾಂಗನಾದ ಮನುಷ್ಯನಿಗೂ, ಅತಿ ಸಾಮಾನ್ಯ ನಾದ, ಕೃಶನಾದ ಹೆಳವನಿಗೂ ಓಟದ ಸ್ಪರ್ಧೆಯನ್ನು ಇಟ್ಟ ಹಾಗೆ ಆಗಿದೆ. ಹಳ್ಳಿಯಿಂದ ಬಂದಂಥ ಯಾವ ಮಕ್ಕಳಿಗೂ ಕೂಡ ಪಟ್ಟಣದಲ್ಲಿ ಮಕ್ಕಳಿಗೆ ದೊರೆಯುಥಂವ ವಿದ್ಯಾಭ್ಯಾಸ ದೊರೆಯುತ್ತಿಲ್ಲ. ಆ ಕಾರಣದಿಂದ ಸರ್ಕಾರ ನೌಕರಿಗಳಿಗೆ ಸ್ಪರ್ಧೆಯನ್ನು ಅನುಸರಿಸುತ್ತಿರುವುದರಿಂದ ಹಳ್ಳಿಯಿಂದ ಬಂದವರಿಗೆ ಸರಿಯಾದ ಪ್ರಾತಿನಿಧ್ಯ, ಅವಕಾಶ ದೊರೆಯುತ್ತಿಲ್ಲ. ಹಾಗಿದ್ದಮೇಲೆ ಹರಿಜನರ ಗತಿ ಏನು? ಹರಿಜನರು ಇನ್ನೂ ಹಿಂದುಳಿಯುತ್ತಿದ್ದಾರೆ. ವಿದ್ಯಾಭ್ಯಾಸ ಪದ್ಧತಿ ಸರಿ ಹೋಗದ ಹೊರತು ಪಟ್ಟಣದಲ್ಲಿ ದೊರೆಯುವ ವಿದ್ಯಾಭ್ಯಾಸ ಹಳ್ಳಿಗಳಲ್ಲಿ ದೊರೆಯುವಂತೆ ಮಾಡದ ಹೊರತು ಸ್ಪರ್ಧೆ, ಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದವರಿಗೆ ಕೆಲಸ ಕೊಡಿ ಎನ್ನುವುದು ಆತ್ಮವಂಚನೆಯಾಗುತ್ತದೆ. ಆ ಕಾರಣದಿಂದ ನಾವು ಅತ್ಯಗತ್ಯವಾಗಿ ಗಮನಕೊಡಬೇಕಾಗಿರುವುದು ವಿದ್ಯಾ ಸಂಸ್ಥೆಗಳು ಸರಿ ಯಾಗಿ ಕೆಲಸ ಮಾಡುವಂತೆ ಮಾಡಬೇಕು. ಗ್ರಾಮಾಂತರದಲ್ಲಿರತಕ್ಕ ಮಕ್ಕಳಿಗೆ ಒಳ್ಳೆಯ ವಿದ್ಯಾ ಭ್ಯಾಸ ದೊರೆಯುವಂತೆ ಏರ್ಪಡಿಸುವುದು ಅತ್ಯಂತ ಅವಶ್ಯಕ. ಮೈಸೂರು ರಾಜ್ಯ ಈ ವಿಚಾರದಲ್ಲಿ

(ಶ್ರೀ ಕೆ. ಪುಟ್ಟಸ್ವಾಮಿ)

ಹಿಂದಿನಿಂದಲೂ ಕೂಡ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಕೈಗೊಂಡಿತ್ತು. 1906-7 ರಲ್ಲಿ ವಿದ್ಯಾಭ್ಯಾಸ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಹರಿಜನರ ಮಕ್ಕಳಿಗೆ ಮೀಸಲಾದಂಥ ಸಂಸ್ಥೆಗಳನ್ನು ಸ್ಥಾಪನೆಮಾಡಿ ಅವರಿಗೆ ಆರ್ಥಿಕ ನೆರವನ್ನು ಕೊಟ್ಟು, ವಿದ್ಯಾವಂತರಾಗುವುದಕ್ಕೆ ಸಹಾಯ ಮಾಡಿದೆ. ಆದರೆ ಇತ್ತೀಚೆಗೆ ಎಷ್ಟೇ ಸಹಾಯವನ್ನು ಒದಗಿಸಿಕೊಡುತ್ತಿದ್ದರೂ ಕೂಡ ಗ್ರಾಮಾಂತರ ವಿದ್ಯಾ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದೆ ಇರುವ ಪ್ರಯುಕ್ತ ಅವರು ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಆಗುತ್ತಿಲ್ಲ. ಈ ವಿಚಾರದಲ್ಲಿ ನಾವು ಗಮನ ಕೊಡಬೇಕಾದ್ದು ಅತ್ಯಂತ ಅಗತ್ಯ, ಮತ್ತು ಅವರ ಆರ್ಥಿಕ ಪರಿಸ್ಥಿತಿಯೂ ಉತ್ತಮವಾಗಬೇಕು. ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕಾದರೆ ಸರ್ಕಾರ ಅವರ ಆರ್ಥಿಕ ಪ್ರಗತಿಗೆ ನೆರವಾಗತಕ್ಕಂಥ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕು. ಈವೊತ್ತು ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯುತ್ತಿದೆ. ನಮ್ಮ ದೇಶದಲ್ಲಿರತಕ್ಕ ಭೂಮಿಯಲ್ಲಿ ವ್ಯವಸಾಯ ಮಾಡಲು ಅಪೇಕ್ಷೆ ಪಡುವವರೆಲ್ಲರಿಗೂ ಕೂಡ ಸಾಕಾಗುವುದಿಲ್ಲ. ಅಂಥ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಕೈಗಾರಿಕೀಕರಣ ಹೆಚ್ಚಿದ ಹೊರತು ಉದ್ಯೋಗಾವಕಾಶ ಹೆಚ್ಚುವುದಿಲ್ಲ. ಅನೇಕ ಸದಸ್ಯರು ಸರಕಾರವನ್ನು ಕುರಿತು

6-00 P.M.

ಮಾತನಾಡುವಾಗ ಉದ್ಯೋಗ ಅವಕಾಶದ ವಿಚಾರದಲ್ಲಿ ಮಾತನಾಡುವಾಗ ಸರಕಾರಿ ನೌಕರಿ ಕಡೆಗೆ ಗಮನವಿಟ್ಟು ಮಾತನಾಡುತ್ತಾರೆ. ಸರಕಾರ, ರಾಜ್ಯದಲ್ಲಿರ ತಕ್ಕಂಥ ಉದ್ಯೋಗ ಒದಗಿಸಿ ಕೊಡತಕ್ಕಂಥ ಸಂಸ್ಥೆಗಳಲ್ಲಿ ದೊಡ್ಡ ಸಂಸ್ಥೆ. ಆದರೆ ಉದ್ಯೋಗ ಅವಕಾಶವನ್ನು ಒದಗಿಸಿಕೊಡತಕ್ಕಂಥ ಸಂಸ್ಥೆಗಳು ಇನ್ನೂ ಅನೇಕ ಇವೆ. ಸರಕಾರದ ಆಶ್ರಯದಲ್ಲಿ ಇರತಕ್ಕ ಸಂಸ್ಥೆಗಳು ಇವೆ. ಸರ್ಕಾರದ ಪಾಲುಗಾರಿಕೆಯಲ್ಲಿ ಇರತಕ್ಕ ಸಂಸ್ಥೆಗಳು ಇವೆ. ಸರ್ಕಾರದ ಪಾಲುಗಾರಿಕೆ ಇಲ್ಲದೇ ಇರತಕ್ಕಂಥ ಸಂಸ್ಥೆಗಳು ಅನೇಕ ಇವೆ. ಸಂಸ್ಥೆಗಳಲ್ಲಿ ಏನು ಭಾವನೆ ಮಾಡುತ್ತಾರೆ ಎಂದರೆ, ಸರ್ಕಾರದ ನೆರವು ಇಲ್ಲದೆ ಕೈಗಾರಿಕಾ ಸಂಸ್ಥೆಗಳನ್ನು ನಡೆಸುವಂಥ ವೇಳೆಯಲ್ಲಿ, ಅಂಥವರನ್ನು, ಇಂಥವರನ್ನು ನೇಮಿಸಿಕೊಳ್ಳಬೇಕು ಎಂದು ಕಡ್ಡಾಯಕ್ಕ ಒಳಗಾಗಬೇಕಾಗಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ಅವರಿಗೆ ಬೆಂಬಲ ಕೊಡಬೇಡಿ.

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀ ಅರಕೇರಿಯವರು ಅಂಥವರಿಗೆ ಯಾವ ಬೆಂಬಲವನ್ನೂ ಕೊಡಬೇಡಿ ಎಂದು ಹೇಳುತ್ತಾರೆ. ಸರ್ಕಾರದ ನೀತಿಗೆ ಯಾವ ಸಂಸ್ಥೆಗಳು ಬದ್ಧವಾಗುವುದಿಲ್ಲವೋ ಅಂಥಾ ಸಂಸ್ಥೆಗಳಿಗೆ ಸರ್ಕಾರ ಯಾವ ವಿಧವಾದ ಪ್ರೋತ್ಸಾಹ ಕೊಡಬೇಕಾಗಿಲ್ಲ, ಕೊಡಕೂಡದು ಎನ್ನುವ ವಿಚಾರ ಹೇಳುತ್ತೇನೆ. ಆದರೆ ತಾವು ಒಂದು ವಿಷಯ ಮರೆಯಬಾರದು, ಸರ್ಕಾರದ ಯಾವ ಸಹಾಯವನ್ನೂ ಅಪೇಕ್ಷೆ ಪಡದೆ ಇರುವ ಅನೇಕ ಖಾಸಗೀ ಸಂಸ್ಥೆಗಳು ಇವೆ. ಸಮಾಜದಲ್ಲಿ ಅವರ ಮೇಲೆ ಕೂಡ ಕಡ್ಡಾಯ ಹೊರಿಸಬೇಕಾದುದು ಅವಶ್ಯಕ. ದೇಶದಲ್ಲಿ ಇರತಕ್ಕ ಎಲ್ಲಾ ವರ್ಗದ ಜನ ಮತ್ತು ಎಲ್ಲಾ ಸಂಸ್ಥೆಗಳಿಗೂ ಕೂಡ ಇದರಲ್ಲಿ ಭಾಗ ವಹಿಸದ ಹೊರತು ಹರಿಜನರ ಸಮಸ್ಯೆ ಪರಿಹಾರವಾಗುವುದಿಲ್ಲ. ಅನೇಕರು ಭೂಮಿ ಕೊಟ್ಟರೆ, ಬಡತನ ನಿವಾರಣೆಯಾಗುತ್ತದೆ ಎಂದು ಭಾವನೆ ಮಾಡಿಕೊಂಡಿದ್ದಾರೆ. ಭೂಮಿ ಕೊಟ್ಟರೆ ಬಡತನ ನಿವಾರಣೆಯಾಗುವುದಿಲ್ಲ. ಕಾರಣ ನಮ್ಮಲ್ಲಿ ಇರತಕ್ಕ ಭೂಮಿ ಕಡಿಮೆ. ಭೂಮಿ ಕೊಟ್ಟಮೇಲೆ ಅದನ್ನು ವ್ಯವಸಾಯಕ್ಕೆ ಯೋಗ್ಯವನ್ನಾಗಿ ಮಾಡಬೇಕಾದರೆ, ಹೆಚ್ಚು ಶ್ರಮ ಪಡೆಯಬೇಕಾಗುತ್ತದೆ, ಹಣ ಬೇಕಾಗುತ್ತದೆ ಮತ್ತು ಶಕ್ತಿ ಬೇಕಾಗುತ್ತದೆ. ಅಷ್ಟು ಎಲ್ಲಾ ಶಕ್ತಿ ಮತ್ತು ಹಣ ಉಪಯೋಗಿಸುವಂಥ ಶಕ್ತಿ ಅವರಲ್ಲಿ ಇಲ್ಲ ಎಂದರೆ ಅವರಿಗೆ ಭೂಮಿ ಕೊಡಬಾರದು ಎಂದು ಹೇಳುವುದಿಲ್ಲ. ದೇಶದಲ್ಲಿ ಇರತಕ್ಕ ಭೂಮಿಯನ್ನು ಹರಿಜನರಿಗೆ ಮೀಸಲಾಗಿ ಇಟ್ಟರೂ ಕೂಡ ಅವರ ಬಡತನ ನಿವಾರಣೆಯಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಉದ್ಯೋಗ ಅವಕಾಶ ಎಷ್ಟು ಇದೆಯೋ, ಅವೆಲ್ಲವನ್ನೂ ಕೂಡ ಅವರಿಗೆ ಒದಗಿಸಿಕೊಟ್ಟರೆ ಮಾತ್ರ ಅವರ ಆರ್ಥಿಕ ಆಗುತ್ತದೇ ವಿನಾ ಇಲ್ಲದಿದ್ದರೆ ಆಗುವುದಿಲ್ಲ. ಮಾನ್ಯ ದುಗ್ಗಪ್ಪನವರು ಆಡಿದಂಥ ಮಾತು ನನಗೆ ಬಹಳ ನೋವನ್ನು ಉಂಟುಮಾಡಿತು. 17 ವರ್ಷಗಳಿಂದ ಅವರು ನನ್ನ ಸಹೋದ್ಯೋಗಿಗಳಾಗಿ ಈ ಸಭೆಯ ಮಾನ್ಯ ಸದಸ್ಯರಾಗಿದ್ದಾರೆ. ಇವತ್ತು ಅವರು ವ್ಯಕ್ತ ಮಾಡಿದಂಥ ಅಭಿಪ್ರಾಯ ನನಗೆ ಆಶ್ಚರ್ಯ ಉಂಟುಮಾಡಿತು ಮತ್ತು ಬಹಳ ನೋವನ್ನು ಉಂಟುಮಾಡಿತು. ಹಿಂದೂ ಸಮಾಜದಲ್ಲಿ ಹರಿಜನರು, ಗಿರಿಜನರು, ಸಂಖ್ಯಾ

ದೃಷ್ಟಿಯಿಂದ ಸಣ್ಣವರಲ್ಲ, ಅಲ್ಪ ಸಂಖ್ಯಾತರಲ್ಲ. ಅವರು ಮನಸ್ಸು ಮಾಡಿದರೆ, ಅವರು ಇವತ್ತು ಯಾರ ಹಿಡಿತದಲ್ಲಿ ಇದ್ದಾರೆ ಎಂದು ಭಾವನೆ ಮಾಡುತ್ತೀರೋ, ಅವರನ್ನೇ ತಮ್ಮ ಹಿಡಿತದಲ್ಲಿ ಇಟ್ಟು ಕೊಳ್ಳುವ ಶಕ್ತಿ ಅವರಿಗಿದೆ. ಮಾನ್ಯ ದುಗ್ಗಪ್ಪನವರಿಗೆ ನೇರವಾಗಿ ಒಂದು ಪ್ರಶ್ನೆ ಹಾಕುತ್ತೇನೆ. ಅವರು 17 ವರ್ಷಗಳಿಂದ ಈ ಸಭೆಯ ಸದಸ್ಯರು ಆಗಿದ್ದರೂ, ಅವರ ಕ್ಷೇತ್ರದಲ್ಲಿ, ಅಂದರೆ ಚಿತ್ರ ದುರ್ಗ ಜಿಲ್ಲೆಯಲ್ಲಿ ಹರಿಜನರು ಬೇರೆಯವರ ಮಟ್ಟಕ್ಕೆ ಬರಲು ಅವರು ಏನು ಮಾಡಿದ್ದಾರೆ? ಎಂದು ನಾನು ಕೇಳುತ್ತೇನೆ. ಯಾವ ಕೆಲಸವೂ ಆಗಿಲ್ಲ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡು ತ್ತೇನೆ, 1947ಕ್ಕೆ ಮುಂಚೆ, ಅಂದರೆ ಸ್ವಾತಂತ್ರ್ಯ ಬರುವುದಕ್ಕೆ ಮುಂದೆ ಸಾರ್ವಜನಿಕ ಮುಖಂಡರು ಹರಿಜನರ ಏಳಿಗೆಯ ವಿಚಾರದಲ್ಲಿ ಯಾವ ಕಾರ್ಯವನ್ನು ಮಾಡುತ್ತಾ ಇದ್ದರೋ, ಆ ಕಾರ್ಯ ವನ್ನು ಅವರು ಮಾಡುತ್ತಾ ಇದ್ದಾರೆಯೇ ?

ಶ್ರೀ ಎಸ್. ಎಸ್. ಅರಕೇರಿ.—ಸಮಾಜದ ಮುಖಂಡರು ಮನಸ್ಸು ಮಾಡಿದರೆ ಹರಿಜನರ ಉದ್ಧಾರವಾಗುತ್ತದೆ. ಆದರೆ ಸಮಾಜದ ಮುಖಂಡರು ಯಾರು ಯಾರು ಉದ್ಧಾರ ಮಾಡುವು ದಿಲ್ಲವೋ ಅಂಥವರನ್ನೇ ಮುಖಂಡರನ್ನಾಗಿ ಮಾಡುತ್ತಾ ಇದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ತಿಳಿದಿದ್ದಾರೆ, ಸಮಾಜದ ಮುಖಂಡರು ಎಂದರೆ, ಅರಕೇರಿ ಯವರು ದುಗ್ಗಪ್ಪನವರು ಇದ್ದಾರೆ. ನಾನೂ ಅವರಂತೆ ಸಮಾಜದ ಮುಖಂಡ. ಇದು ಎಲ್ಲರ ಮೇಲೂ ಬಿದ್ದಿರುವ ಜವಾಬ್ದಾರಿ.

(*Interruptions*)

ಮಾನ್ಯ ಸದಸ್ಯರು ಮಾತನಾಡುವ ವೇಳೆಯಲ್ಲಿ ಚಕಾರ ಆಡದೆ ನಾನು ಕೇಳಿದೆ. ಅವರಿಗೆ ಉತ್ತರ ಕೊಡುವಾಗ, ಅವರಿಗೆ ಅದು ಚುಚ್ಚಿದರೆ, ಅಥವಾ ಅವರು ಮಾಡುತ್ತಾ ಇರುವ ತಪ್ಪನ್ನು ಎತ್ತಿ ತೋರಿಸಿದರೆ, ಈ ತರಹ ಅಡಚಣೆ ಮಾಡುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ನಾನು ಸಂಪೂರ್ಣವಾಗಿ ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ನೀವು ಹೇಳುವುದು ನಿಜ. ನೀವು ಹೇಳತಕ್ಕ ವಾದದ ಧಾಟಿ ಸರಿ. ಹಿಂದೆ ಸಮಾಜದ ಮುಖಂಡರು, ಹಿಂದುಳಿದವರು ಮುಂದುವರಿಯಬೇಕು ಎನ್ನುವ ಕಾಲ ಇತ್ತು. ಈಗ ಕಾಲ ಏನು ಬಂದಿದೆ ಎಂದರೆ ನೀವು ಹೇಳಿದಹಾಗೆ ಅಸ್ಪೃಶ್ಯರನ್ನು ಅಸ್ಪೃಶ್ಯ ಮುಖಂಡರುಗಳೇ ಉದ್ಧಾರ ಮಾಡ ಬೇಕು, ನಮ್ಮ ಉದ್ಧಾರ ನಮ್ಮ ಕೈಯಲ್ಲಿಯೇ ಇದೆ ಎಂದು ತಾವು ಹೇಳುವುದು ಸರಿ.

ಶ್ರೀ ಕೆ. ಪುಟ್ಟಸ್ವಾಮಿ.—ಕ್ರಾಂತಿ ಲೋಕದಲ್ಲಿ ದುಗ್ಗಪ್ಪನವರು ಇದ್ದಾರೆ. ಅದು ತಪ್ಪು. ಇವತ್ತು ಕೂಡ ಹರಿಜನರ ಏಳಿಗೆಯ ವಿಚಾರದಲ್ಲಿ ಬೇರೆ ಮುಖಂಡರು ಯಾರನ್ನು ಅವರು ಹೇಳು ತ್ತಾರೋ, ಅವರು ಸಮಾಜದ ಸೇವಕರು, ಅವರು ಹರಿಜನರ ಮುಖಂಡರಿಗಿಂತ ಕಡಿಮೆ ಇಲ್ಲದಷ್ಟು ಆಸಕ್ತಿ ವಹಿಸುತ್ತಾರೆ ಎಂದು ಹೇಳುತ್ತೇನೆ. ಈ ವಿಷಯದಲ್ಲಿ ಹೆಚ್ಚು ಕಾಲವನ್ನು ತೆಗೆದುಕೊಳ್ಳುವು ದಕ್ಕೆ ಅಪೇಕ್ಷೆಪಡುವುದಿಲ್ಲ. ಎರಡು ಮೂರು ಗಂಟೆ ಚರ್ಚೆ ಮಾಡಿ, ಐದು ನಿಮಿಷಗಳಲ್ಲಿ ಉತ್ತರ ಹೇಳಬೇಕು ಎಂದರೆ, ಅದಕ್ಕೂ ಅವಕಾಶವಿಲ್ಲ. ದುಗ್ಗಪ್ಪನವರು ನನ್ನ ಕೈಯಿಂದ ಪಾರು ಆಗಿಲ್ಲ. ಅವರು ಹೇಳಿದ್ದಕ್ಕೆ ಬೇರೆ ಸಮಯ ಉಪಯೋಗಿಸಿಕೊಂಡು ಉತ್ತರ ಕೊಡುತ್ತೇನೆ. ಈ ನಿರ್ಣಯ ವನ್ನು ತಾವೆಲ್ಲರೂ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Sri M. NAGAPPA.—Sir, I do not press my amendment to the resolution. I beg leave of the House to withdraw it.

The amendment was, by leave, withdrawn.

Mr. SPEAKER.—I shall now put the resolution to the vote of the House. The question is :

"That this House ratifies the amendments to the Constitution of India falling within the purview of the proviso to article

(Mr. Speaker)

368 thereof, proposed to be made by the Constitution (Twenty—Third amendment) Bill, 1969, as passed by both Houses of Parliament."

The motion was adopted unanimously.

Mr. SPEAKER.—The House stands adjourned to meet again tomorrow at 1 P.M.

The House adjourned at Nine Minutes past Six of the Clock, to meet again at One of the Clock on Wednesday, the 21st January, 1970.